# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

ಸಂಪಾದಕ : ಮಂಜು ಬನವಾಸೆ

KANNADA POST

ಕನ್ನಡ ದಿನ ಪತ್ರಿಕೆ Kannada Daily

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.01 | Issue. 174 | Pages. 2 | Date: 17-05-2025, SATURDAY RNI NO: KARKAN/2024/89601

ಸಂಪುಟ : 01 - ಸಂಚಿಕೆ : 174 - ಪುಟಗಳು : 2 - 17 ಮೇ 2025 ಶನಿವಾರ Ph: 8762954248 ದರ : ₹1


# ಸಾರ್ವಜನಿಕರಿಗೆ ನ್ಯಾಯ : ಅಧಿಕಾರಿಗಳ ಆದ್ಯತೆಯಾಗಲಿ

## ಉಪ ಲೋಕಾಯುಕ್ತ ನ್ಯಾ. ಕಟ್ಟುನಿಟ್ಟಿನ ಸೂಚನೆ | ಜನರಿಂದ ದೂರು ಸ್ವೀಕಾರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಾರ್ವಜನಿಕರಿಗೆ ಸೇವೆ ಒದಗಿಸುವುದೇ ಅಧಿಕಾರಿಗಳ ಕರ್ತವ್ಯವಾಗಿರುವಾಗ ವಿನಾಕಾರಣ ವಿಳಂಬ, ಕಚೇರಿಗೆ ಅಲೆಸುವುದನ್ನು ಯಾವ ಕಾರಣಕ್ಕೂ ಮಾಡಬಾರದು ಎಂದು ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಕಟ್ಟುನಿಟ್ಟಿನ ಸೂಚನೆ ನೀಡಿದರು.



ನಗರದ ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಶುಕ್ರವಾರ 2ನೇ ದಿನದ ಕುಂದು ಕೊರತೆ, ದೂರು ಹಾಗೂ ಪ್ರಕರಣಗಳ ವಿಲೇವಾರಿ ಸಭೆಯಲ್ಲಿ ಮಾತನಾಡಿದರು.

ಚನ್ನರಾಯಪಟ್ಟಣ ತಾಲ್ಲೂಕು ಕಬ್ಬಾಳು ಗ್ರಾಮದ ಸಣ್ಣಪ್ಪ ಎಂಬುವರಿಗೆ ಜಮೀನು ಮಂಜೂರು ಪತ್ರ ಇದ್ದರೂ, ಖಾತೆ ಮಾಡಿಕೊಡದ ತಹಶೀಲ್ದಾರ್ ನವೀನ ಕುಮಾರ್ ಅವರಿಗೆ ಫಣೀಂದ್ರ, ಮಂಗಳಾರತಿ ಮಾಡಿದರು.

ಸಣ್ಣಪ್ಪ ಅನುಭೋಗದಲ್ಲಿ ಇಲ್ಲ ಎಂದು ಗ್ರಾಮಸ್ಥರು ಹೇಳಿದ್ದರಿಂದ ಖಾತೆ ಮಾಡಿಲ್ಲ ಎಂದು ತಹಶೀಲ್ದಾರ್ ಹೇಳಿದರು. ಆದರೆ ಹಿಂಬರಹ ನೀಡದೇ ಇದ್ದ ಕಾರಣಕ್ಕೆ ನೀವು ತಹಶೀಲ್ದಾರ್ ಆಗಿ ಎಷ್ಟು ವರ್ಷ ಆಯ್ತು, ಜವಾಬ್ದಾರಿ ಇಲ್ವಾ, ನಿಮಗೆ ತಹಶೀಲ್ದಾರ್ ಕೆಲಸ ಕೊಟ್ಟೋರು ಯಾರು, ಸತ್ಯ ಹೇಳೋದು ಕಲಿಯಿರಿ, ಯಾವ ಸೀಮೆಯವರು ನೀವು ಎಂದು ತರಾಟೆಗೆ ತೆಗೆದುಕೊಂಡರು.

ಈ ಸಂಬಂಧ ಎಸಿಗೆ ಮೇಲ್ಮನವಿ ಸಲ್ಲಿಸಿ ಎಂದು ದೂರುದಾರರಿಗೆ ಸಲಹೆ ನೀಡಿ ನ್ಯಾ. ಫಣೀಂದ್ರ ಅವರು ಪ್ರಕರಣಕ್ಕೆ ಇತಿಶ್ರೀ ಹಾಡಿದರು.

ಅದೇ ತಾಲ್ಲೂಕಿನ ದಂಡಿಗನಹಳ್ಳಿ ಹೋಬಳಿಯ ಮತ್ತೊಂದು ಪ್ರಕರಣದಲ್ಲಿ ಕಿರಣ್ ಕುಮಾರ್ ಎಂಬುವರು ಖಾತೆಗೆ ಅರ್ಜಿ ಸಲ್ಲಿಸಿದ್ದರೂ ಏನೂ ಬೆಳವಣಿಗೆ ಆಗಿಲ್ಲ ಎಂದರು. ತಮ್ಮ ಜಮೀನನ್ನು ವಾರಕ್ಕೆ ನೀಡಿರುವ ಬಗ್ಗೆ ಏನು ಪುರಾವೆ ಇದೆ ಎಂದು ಕೇಳಿದ್ದಕ್ಕೆ ದೂರುದಾರರ ಬಳಿ ಏನೂ ದಾಖಲೆ ಇರಲಿಲ್ಲ. ಹಾಗಾಗಿ ಎಸಿ ಮುಂದೆ ಹೋಗಿ ಎಂದು ಸೂಚಿಸಿದರು.

ಇದೇ ರೀತಿ ಹೇಮಾವತಿ ಯೋಜನೆ ಪುನರ್ವಸತಿ ಯೋಜನೆಯಡಿ ಜಮೀನು ಮಂಜೂರಾಗಿದ್ದರೂ ಖಾತೆ ಮಾಡಿಕೊಟ್ಟಿಲ್ಲ, ಖಾತೆ ಬದಲಾವಣೆಯಲ್ಲಿ ಹೆಸರು ಅದಲು ಬದಲಾಗಿದ್ದರೂ, ಸರಿಪಡಿಸಿ ಎಂದು ದೂರು ನೀಡಿದ್ದರೂ ಸರಿಪಡಿಸಿಲ್ಲ ಎಂಬಿತ್ಯಾದಿ ಪ್ರಕರಣಗಳಲ್ಲಿ ಕೆಲವರು ಮೇಲ್ಮನವಿ ಪ್ರಾಧಿಕಾರಕ್ಕೆ ದೂರು ಸಲ್ಲಿಸಿ ಎಂದು ಸಲಹೆ ನೀಡಿದ ಉಪ ಲೋಕಾಯುಕ್ತರು, ಇನ್ನೂ ಕೆಲವು ಪ್ರಕರಣಗಳನ್ನು ಮುಂದೂಡಿದರು. ಇನ್ನೂ ಕೆಲವರು ಕೋರ್ಟ್‌ಗಳಿಗೂ ದೂರು ಸಲ್ಲಿಸಿ ನಂತರ ಲೋಕಾಯುಕ್ತಕ್ಕೂ ದೂರು ನೀಡಿದ್ದರು. ಇದನ್ನು ತಿಳಿದು ಗರಂ ಆದ ಲೋಕಾಯುಕ್ತರು, ಕೋರ್ಟ್‌ನಲ್ಲಿ ಇತ್ಯರ್ಥ ಆದ ಬಳಿಕ ತಮ್ಮ ಬಳಿಗೆ ಬನ್ನಿ. ನೀವು ನ್ಯಾಯಾಲಯದ ಮೊರೆ ಹೋಗಿಯೂ ಅದನ್ನು ಮುಚ್ಚಿಟ್ಟು ನಮ್ಮಿಂದ ಬೇರೆ ತೀರ್ಪು ಕೊಡಿಸಲು ಪ್ರಯತ್ನ ಮಾಡಬೇಡಿ ಎಂದು ಎಚ್ಚರಿಕೆ ನೀಡಿದರು.

ಲೋಕಾಯುಕ್ತದ ವಿಚಾರಣೆಗಳು 07 ಅಪರ ನಿಬಂಧಕ ಪೃಥ್ವಿರಾಜ್ ವರ್ಣೇಕರ್, ಕಾನೂನು ಅಭಿಪ್ರಾಯ 02 ಸಹಾಯಕ ನಿಬಂಧಕ ಬಿ. ಶುಭವೀರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಬಿ.ಕೆ. ದಾಕ್ಷಾಯಿಣಿ, ಉಪಲೋಕಾಯುಕ್ತರ ಆಪ್ತ ಕಾರ್ಯದರ್ಶಿ ಕಿರಣ್ ಪಿ.ಎಂ. ಪಾಟೀಲ್, ಲೋಕಾಯುಕ್ತ ಪೊಲೀಸ್ ಅಧೀಕ್ಷಕಿ ಸ್ನೇಹ, ಜಿಲ್ಲಾಧಿಕಾರಿ ಸಿ. ಸತ್ಯಭಾಮ, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವೆಂಕಟೇಶ್ ನಾಯ್ಡು, ಅಪರ ಜಿಲ್ಲಾಧಿಕಾರಿ ಕೆ.ಟಿ. ಶಾಂತಲ, ನಗರಸಭೆ ಆಯುಕ್ತ ರಮೇಶ್ ಹಾಗೂ ಇತರರಿದ್ದರು.




### ಕಳ್ಳತನಕ್ಕೆ ಕಡಿವಾಣ ಹಾಕಿ

ಹೊಸ ಬಸ್ ನಿಲ್ದಾಣಕ್ಕೆ ಭೇಟಿ ನೀಡಿದ ಉಪ ಲೋಕಾಯುಕ್ತರು ಸಿಸಿಟಿವಿ ಕ್ಯಾಮರಾ ಏಕೆ ಅಳವಡಿಸಿಲ್ಲ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು. ಜನದಟ್ಟಣೆ ಹೆಚ್ಚಿರುವ ಪ್ರದೇಶದಲ್ಲಿ ಕಳ್ಳತನ ಸೇರಿ ಮತ್ತಿತರ ಅನಾಹುತ ಸಂಭವಿಸುತ್ತವೆ. ಸಿಸಿಟಿವಿ ಕ್ಯಾಮರಾ ಇದ್ದರೆ ಸಮಸ್ಯೆ ತಪ್ಪಿಸಬಹುದು. ಶೌಚಾಲಯದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಬೇಕು. ಬಸ್ ನಿಲ್ದಾಣದ ಅಂಗಡಿಗಳಲ್ಲಿ ವಸ್ತುಗಳ ಬೆಲೆ ಹೆಚ್ಚಿಸಿರುವ ಆರೋಪ ಕೇಳಿಬಂದಿದ್ದು ನಿಯಂತ್ರಣ ವಿಧಿಸಬೇಕು ಎಂದರು.



ಸಾರ್ವಜನಿಕ ಸಮಸ್ಯೆಗಳನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಬೇಕು. ಈ ನಿಟ್ಟಿನಲ್ಲಿ ನಿರ್ಲಕ್ಷ್ಯ ತೋರುವವರ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲಿಸಿ ಕ್ರಮ ಜರುಗಿಸಬೇಕು. ಅಗಿಲೆ ಕಸ ವಿಲೇವಾರಿ ಘಟಕದಲ್ಲಿನ ಅವ್ಯವಸ್ಥೆ ಸರಿಪಡಿಸಬೇಕು.

**-ಕೆ.ಎನ್. ಫಣೀಂದ್ರ, ಉಪ ಲೋಕಾಯುಕ್ತ ನ್ಯಾಯಮೂರ್ತಿ**

### ಸ್ವಯಂ ಪ್ರೇರಿತ ದೂರು ದಾಖಲಿಸಿ

ವೈಜ್ಞಾನಿಕ ತ್ಯಾಜ್ಯ ವಿಲೇವಾರಿಯಲ್ಲಿ ನಿರ್ಲಕ್ಷ್ಯ ವಹಿಸುತ್ತಿರುವ ನಗರಸಭೆ ಅಧಿಕಾರಿಗಳ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲಿಸಿ ಕ್ರಮ ಜರುಗಿಸಬೇಕು ಎಂದು ಉಪ ಲೋಕಾಯುಕ್ತ ನ್ಯಾ. ಕೆ.ಎನ್. ಫಣೀಂದ್ರ ಅವರು ಜಿಲ್ಲಾಡಳಿತ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೆಳಿಗ್ಗೆ ತಾಲ್ಲೂಕಿನ ಅಗಿಲೆ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಭೇಟಿ ನೀಡಿ ಅಲ್ಲಿನ ಅವ್ಯವಸ್ಥೆ ಕಂಡು ಗರಂ ಆದರು. ಜೊತೆಗೆ ಗ್ರಾಮಸ್ಥರ ಅಹವಾಲು ಆಲಿಸಿ ಅಧಿಕಾರಿಗಳ ವಿರುದ್ಧ ಬೇಸರ ಹೊರಹಾಕಿದರು.

ಹಸಿ ಹಾಗೂ ಒಣ ಕಸ ಪ್ರತ್ಯೇಕವಾಗಿಸಿ ಕಸದಿಂದ ರಸ ಮಾಡಬೇಕೆಂಬ ನಿಯಮವಿದೆ. ಹಸಿ ಕಸದಿಂದ ಗೊಬ್ಬರ ತಯಾರಿಸಿ ರೈತರಿಗೆ ನೀಡಬೇಕು. ಆದರೆ ಇಲ್ಲಿ ಪ್ಲಾಸ್ಟಿಕ್ ಪದಾರ್ಥಗಳನ್ನು ಗೊಬ್ಬರವಾಗಿ ಪರಿವರ್ತಿಸಲಾಗುತ್ತಿದೆ. ಈ ರೀತಿಯ ನಿರ್ಲಕ್ಷ್ಯದ ಕಾರ್ಯನಿರ್ವಹಣೆ ಒಪ್ಪುವಂತಹದಲ್ಲ ಎಂದು ಕಿಡಿಕಾರಿದರು.

ಇದೆ ವೇಳೆ ನ್ಯಾಯಮೂರ್ತಿಗಳನ್ನು ಭೇಟಿಯಾದ ಸ್ಥಳೀಯರು, ನಗರಸಭೆಯಿಂದ ತ್ಯಾಜ್ಯ ತುಂಬಿಕೊಂಡು ಬರುವ ಟಿಪ್ಪರ್ ಹಾಗು ಟ್ರ್ಯಾಕ್ಟರ್ ಚಾಲಕರು ರಸ್ತೆಯ ಎಲ್ಲೆಂದರಲ್ಲಿ ಬಿಸಾಡುತ್ತಾರೆ. ಮಾಂಸದಂಗಡಿ ತ್ಯಾಜ್ಯ, ಹೋಟೆಲ್ ಪದಾರ್ಥವಿರುವುದರಿಂದ ಬೀದಿ ನಾಯಿಗಳು ಮುಗಿ ಬೀಳುತ್ತವೆ. ರಸ್ತೆಯಲ್ಲಿ ಸಾರ್ವಜನಿಕರು ಅಥವಾ ಸಾಕು ದನಗಳು ಬಂದರೆ ಗುಂಪಾಗಿ ಹಲ್ಲೆ ಮಾಡುತ್ತವೆ. ಈ ಸಂಬಂಧ ನಗರಸಭೆ ಅಧಿಕಾರಿಗಳು ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ನಗರಸಭೆಯ ಪ್ರಮಾದದಿಂದ ಸಾಕಷ್ಟು ಜಾನುವಾರುಗಳನ್ನು ಕಳೆದುಕೊಂಡಿದ್ದೇವೆ ಎಂದು ಅವಲತ್ತುಕೊಂಡರು.

ಸ್ವಲ್ಪ ಮಳೆಯಾದರೂ ಕೊಳಚೆ ನೀರು ಗ್ರಾಮಕ್ಕೆ ಹರಿಯುತ್ತಿದೆ. ಕೆರೆ ಕಟ್ಟೆಗಳೆಲ್ಲಾ ಕಲುಷಿತವಾಗಿದೆ. ಬೀದಿ ನಾಯಿಗಳು ಮಾತ್ರವಲ್ಲದೆ ಆಹಾರ ಅರಸಿ ಇತ್ತೀಚೆಗೆ ಚಿರತೆಗಳು ಬರುತ್ತಿವೆ ಎಂದರು. ಗ್ರಾಮಸ್ಥರ ಸಮಸ್ಯೆಗಳನ್ನು ಪರಿಶೀಲಿಸಿ ಪರಿಹಾರ ಕ್ರಮ ಕೈಗೊಳ್ಳಬೇಕು ಎಂದು ನ್ಯಾ. ಕೆ.ಎನ್. ಫಣೀಂದ್ರ ಅವರು ಅಧಿಕಾರಿಗಳಿಗೆ ಸೂಚಿಸಿದರು.

### ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಿ

ಯಾವುದೇ ದೂರು ತಮ್ಮ ಬಳಿಗೆ ಬಂದರೆ ಕೇವಲ ಆದೇಶ ರದ್ದು ಮಾಡುವುದಲ್ಲ. ಬದಲಾಗಿ ಕರ್ತವ್ಯಲೋಪ, ನಿರ್ಲಕ್ಷ್ಯ, ನಕಲಿ ದಾಖಲೆ ಸೃಷ್ಟಿದ್ದರೆ ಗಮನ ಹರಿಸಬೇಕು. ಯಾರು ತಪ್ಪು ಮಾಡಿದ್ದಾರೋ ಅವರನ್ನು ದಂಡಿಸಬೇಕು. ಮರು ಪರಿಶೀಲನೆ ಮಾತ್ರವಲ್ಲದೆ ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸಿ ತಪ್ಪು ಮಾಡಿದವರಿಗೆ ಶಿಕ್ಷೆ ಕೊಡಿಸಬೇಕು ಎಂದು ಉಪವಿಭಾಗಾಧಿಕಾರಿಗಳಿಗೆ ಉಪ ಲೋಕಾಯುಕ್ತರು ಸಲಹೆ ನೀಡಿದರು.

## ರೈಲ್ವೆ ನಿಲ್ದಾಣದಲ್ಲಿ ವಿಪತ್ತು ನಿರ್ವಹಣಾ ಕಸರತ್ತು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ನೈಋತ್ಯ ರೈಲ್ವೆ ಮೈಸೂರು ವಿಭಾಗವು ರಾಷ್ಟ್ರೀಯ ವಿಪತ್ತು ಪ್ರತಿಕ್ರಿಯಾ ಪಡೆ ಮತ್ತು ರಾಜ್ಯ ಸರ್ಕಾರದ ಸಂಸ್ಥೆಗಳ ಸಹಯೋಗದೊಂದಿಗೆ ನಗರದ ರೈಲ್ವೆ ನಿಲ್ದಾಣದಲ್ಲಿ ಸಂಪೂರ್ಣ ಪ್ರಮಾಣದ ವಿಪತ್ತು ನಿರ್ವಹಣಾ ಕಸರತ್ತು ನಡೆಸಿತು.

ವಿಪತ್ತು ನಿರ್ವಹಣಾ ಯೋಜನೆಯ ಪರಿಣಾಮಕಾರಿತ್ವ ಪರೀಕ್ಷಿಸುವುದಾಗಿತ್ತು. ರೈಲ್ವೆ ವಿವಿಧ ವಿಭಾಗಗಳ ಸಿಬ್ಬಂದಿಗೆ ತುರ್ತು ಪರಿಸ್ಥಿತಿ ಗಳಲ್ಲಿ ಸುರಕ್ಷತಾ ಕ್ರಮಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸಲಹೆ ನೀಡಲಾಯಿತು.

ವಿಪತ್ತು ನಿರ್ವಹಣೆ ಮಾನವ ಜೀವನ ಮತ್ತು ಆಸ್ತಿಯ ನಷ್ಟವನ್ನು ಕಡಿಮೆ ಮಾಡಲು ಅಥವಾ ತಡೆಗಟ್ಟಲು, ಸಕಾಲಿಕ ಮತ್ತು ಸೂಕ್ತ ಪ್ರತಿಕ್ರಿಯೆ ಮತ್ತು ಸಹಾಯ ಒದಗಿಸುವ ಗುರಿ ಹೊಂದಿದೆ.

ಕಸರತ್ತಿನ ಭಾಗವಾಗಿ ವಿವಿಧ ರೈಲುಗಾಡಿ ಹಳಿತಪ್ಪಿ ಪಲ್ಟಿಯಾದಂತೆ ತೋರಿಸಲಾಯಿತು. ಕೃತಕ ಘಟನೆ ಮಾಹಿತಿ ಸಿಕ್ಕ ತಕ್ಷಣ, ರೈಲ್ವೆ ಅಧಿಕಾರಿಗಳು ತಕ್ಷಣವೇ ಸ್ಥಳಕ್ಕೆ ಧಾವಿಸಿ, ಪ್ರೋಟೋಕಾಲ್‌ಗಳಿಗೆ ಅನುಗುಣವಾಗಿ ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆ ಆರಂಭಿಸಿದರು. ಎನ್‌ಡಿಆರ್‌ಎಫ್ ತಂಡ ಮತ್ತು ಜಿಲ್ಲಾ ಅಗ್ನಿಶಾಮಕ ದಳ ಎಚ್ಚರಿಕೆ ಪಡೆದ 20 ನಿಮಿಷಗಳ ಒಳಗೆ ಸ್ಥಳಕ್ಕೆ ಆಗಮಿಸಿದವು. ರೈಲ್ವೆ ಆಸ್ಪತ್ರೆ ವೈದ್ಯರು ಮತ್ತು ದಾದಿಯರನ್ನು ಒಳಗೊಂಡ ವೈದ್ಯಕೀಯ ತಂಡಗಳು, ಆಂಬ್ಯುಲೆನ್ಸ್ ಗಳೊಂದಿಗೆ ಬಂದು ಎರಡು ಕೋಚ್‌ಗಳೊಳಗೆ ಸಿಲುಕಿಕೊಂಡಿದ್ದ ಸುಮಾರು 25 ಪ್ರಯಾಣಿಕರಿಗೆ ಪ್ರಥಮ ಚಿಕಿತ್ಸೆ ನೀಡಲು ಮತ್ತು ಅವರನ್ನು ಸ್ಥಳಾಂತರಿಸಿದವು.

ನೈಋತ್ಯ ರೈಲ್ವೆ ಪ್ರಧಾನ ಮುಖ್ಯ ಸುರಕ್ಷತಾ ಅಧಿಕಾರಿ ರಾಮಕೃಷ್ಣ, ನೈಋತ್ಯ ರೈಲ್ವೆ ಮುಖ್ಯ ರೈಲ್ವೆ ಸುರಕ್ಷತಾ ಎಂಜಿನಿಯರ್ ಬಾಲಸುಂದರ್ ಪಿ., ಮೈಸೂರಿನ ಎಡಿಆರ್‌ಎಂ ವಿನಾಯಕ್ ಆರ್. ನಾಯಕ್ ಮತ್ತು ಇತರೆ ಅಧಿಕಾರಿಗಳಿದ್ದರು. ಕಾರ್ಯಾಚರಣೆ ಸುಮಾರು 120 ನಿಮಿಷಗಳ ಕಾಲ ನಡೆಯಿತು.

## ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಬೇಡ: ಕೆಎಂಶಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಭಾರತ-ಪಾಕಿಸ್ತಾನ ನಡುವಿನ ಸಂಘರ್ಷದ ಕುರಿತು ಕೆಲವರು ತಿಳಿದು ಮತ್ತೆ ಕೆಲವರು ತಿಳಿಯದೆ ಮಾತನಾಡುತ್ತಾರೆ ಎಂದು ಶಾಸಕ ಕೊತ್ತೂರು ಮಂಜುನಾಥ್ ಹೇಳಿಕೆಗೆ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷ ಕೆ.ಎಂ. ಶಿವಲಿಂಗೇಗೌಡ ಪ್ರತಿಕ್ರಿಯಿಸಿದರು.

ಸುದ್ದಿಗಾರರೊಂದಿಗೆ ಶುಕ್ರವಾರ ಮಾತನಾಡಿ, ಕೆಲವರು ತಿಳಿದು ಹೇಳ್ತಾರೆ, ಕೆಲವರು ತಿಳಿಯದೇ ಹೇಳ್ತಾರೆ, ಇದು ಅಂತಾರಾಷ್ಟ್ರೀಯ ಸಂಬಂಧ, ದೇಶದ ಸ್ವಾಭಿಮಾನದ ಸಂಬಂಧ, ದೇಶ ಉಳಿದರೆ ನಾವೆಲ್ಲಾ, ಮೊದಲು ದೇಶ ಉಳಿಯಬೇಕು ಎಂದರು.



ದೇಶದ ಅಳಿವು-ಉಳಿವಿನ ನಿರ್ಧಾರ ತೆಗೆದುಕೊಳ್ಳುವುದು ಈ ದೇಶವನ್ನು ಆಳುವ ಪ್ರಧಾನ ಮಂತ್ರಿ, ಅವರ ಪಕ್ಷದ ನಿರ್ಧಾರ, ಅವರು ದೇಶವನ್ನು ಮುನ್ನಡೆಸಿಕೊಂಡು ಹೋಗಿದ್ದಾರೆ. ಭಾರತ ದೇಶಕ್ಕೆ ಒಳ್ಳೆಯದಾಗಬೇಕು ಎಂದು ನಾವು ಹಾರೈಸಬೇಕೆ ಹೊರತು, ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಮಾಡಬಾರದು ಎಂದು ಟಾಂಗ್ ನೀಡಿದರು.

ಕೆಲವು ತಪ್ಪುಗಳಾಗಿವೆ, ಇಲ್ಲ ಅಂತ ನಾನು ಹೇಳಲ್ಲ, ಆದರೆ ತಪ್ಪಾಗಿದೆ ಎಂದು ಅದನ್ನೇ ದೊಡ್ಡದು ಮಾಡುವ ಕೆಲಸ ಮಾಡಬಾರದು. ದೇಶಕ್ಕೋಸ್ಕರ ದೇಶಾಭಿಮಾನದಿಂದ ಇರಬೇಕು, ಒಳ್ಳೆಯ ಕೆಲಸ ಮಾಡಬೇಕು ಎಂದರು.

ಇದರಲ್ಲಿ ಕಲ್ಲು ಬೆರೆಸುವ ಕೆಲಸವನ್ನು ಯಾರೇ ಆಗಲಿ ಮಾಡಬಾರದು, ಆ ಹೇಳಿಕೆ ಅವರ ಇಷ್ಟ, ಅವರಿಗೆ ಬಿಟ್ಟದ್ದು, ಆ ರೀತಿ ಮಾತನಾಡೋದು ಅದನ್ನು ಸರಿ ಎಂದು ನಾನು ಹೇಳಲ್ಲ, ಸಮರ್ಥನೆ ಮಾಡಿಕೊಳ್ಳಲ್ಲ ಎಂದು ಹೇಳಿದರು.

ಅಂತಹ ಸೂಕ್ಷ್ಮವಾದ ವಿಚಾರದ ಬಗ್ಗೆ ನಾನು ಮಾತನಾಡುವುದಿಲ್ಲ. ದೇಶಕ್ಕಿಂತ ದೊಡ್ಡವರು ಯಾರು ಇಲ್ಲ, ದೇಶವೇ ದೊಡ್ಡದು ಎಂದರು.

ಇದೇ ವೇಳೆ ಸಚಿವ ಸ್ಥಾನದ ಆಸೆ ಬಿಚ್ಚಿಟ್ಟ ಗೃಹಮಂಡಳಿ ಅಧ್ಯಕ್ಷರು, ಸರ್ಕಾರ ಎರಡು ವರ್ಷ ತುಂಬಿ ಸುಭದ್ರ ಸರ್ಕಾರವಾಗಿ ಉಳಿದಿದೆ. ಯಾರೇ ಏನೇ ಬೊಮ್ಮಡಿ ಹೊಡೆದುಕೊಂಡರೂ ತಲೆಕೆಡಿಸಿಕೊಳ್ಳಬೇಕಾದ ಅವಶ್ಯಕತೆ ಇಲ್ಲ, ನಮ್ಮ ಸರ್ಕಾರ ಗಟ್ಟಿಯಾಗಿ ಇರಲಿದೆ ಎಂದರು.

ಸಿದ್ದರಾಮಯ್ಯ ಅವರು ಆರ್ಥಿಕ ತಜ್ಞರ ರೀತಿ ನಡೆಸಿಕೊಂಡು ಹೋಗುತ್ತಿದ್ದಾರೆ, ಸಾಮಾಜಿಕ ನ್ಯಾಯದ ಹರಿಕಾರ ಅಂತ ಹೇಳಬಹುದು, ಉತ್ತಮವಾದಂತಹ ಕೆಲಸಗಳು ಆಗಿವೆ, ಮಂತ್ರಿ ಸ್ಥಾನ ಕೊಡ್ತೀವಿ ಅಂಥ ಪ್ರಾಮಿಸ್ ಮಾಡಿ ಜೆಡಿಎಸ್‌ನಿಂದ ಕಾಂಗ್ರೆಸ್‌ಗೆ ಕರೆದುಕೊಂಡು ಹೋದರು. ಅದರಲ್ಲಿ ಏನು ಮುಚ್ಚು ಮರೆ ಇಲ್ಲ ಎಂದು ಹೇಳಿದರು.

ಸಿದ್ದರಾಮಯ್ಯ ಅವರೇ ಸಚಿವ ಸ್ಥಾನ ಕೊಡ್ತೀವಿ ಅಂಥ ಹೇಳಿದ್ರು, ಈಗಲೂ ಎರಡೂವರೆ ವರ್ಷ ಆದ ಮೇಲೆ ಸಚಿವ ಸ್ಥಾನ ನೀಡುತ್ತೇವೆ ಅಂತ ಎಲ್ಲರ ಮುಂದೆ, ಸಾರ್ವಜನಿಕ ಭಾಷಣದಲ್ಲಿ ಹೇಳಿದ್ದಾರೆ. ಇನ್ನೂ ಸಂಪುಟ ಪುನರ್ ರಚನೆ ಆಗಿಲ್ಲ, ಅದು ಆದಾಗ ಕೊಡ್ತಾರೆ ಎನ್ನುವ ಭಾವನೆ ನನಗೂ ಇದೆ ನಮ್ಮ ಜನಕ್ಕೂ ಇದೆ, ಅವರಿಗೂ ಇದೆ ಎಂದು ತಮ್ಮ ಮನದ ಇಂಗಿತ ವ್ಯಕ್ತಪಡಿಸಿದರು.

ಹಾಸನ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಗೆದ್ದಿರುವುದು ನಾನೊಬ್ಬನೇ ಶಾಸಕ, ಪಕ್ಷವನ್ನು ಬಲಪಡಿಸಬೇಕು ಎಂದರೆ ಮಂತ್ರಿ ಸ್ಥಾನ ಕೊಡಬೇಕು ಎನ್ನುವುದು ರಾಜಕೀಯ ಲೆಕ್ಕಾಚಾರ. ಕೊಡುತ್ತಾರೆ ಎಂದು ಭಾವಿಸಿಕೊಂಡಿದ್ದೇನೆ.

ಹೈಕಮಾಂಡ್ ಯಾವಾಗ ಸಂಪುಟ ಪುನರ್ ರಚನೆ ಮಾಡುತ್ತೆ, ಆಗ ಕೊಡಬಹುದು ಎನ್ನುವುದು ನನ್ನ ಅನಿಸಿಕೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## ಹಿರೀಸಾವೆ ಹಾಲು ಉತ್ಪಾದಕರ ಸಂಘಕ್ಕೆ ಪವಿತ್ರ ಮಂಜುನಾಥ್ ಅಧ್ಯಕ್ಷೆ



ಚನ್ನರಾಯಪಟ್ಟಣ: ತಾಲ್ಲೂಕಿನ ಹಿರೀಸಾವೆ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಅಧ್ಯಕ್ಷರಾಗಿ ಪವಿತ್ರ ಮಂಜುನಾಥ್ ಆಯ್ಕೆಯಾದರು.

ವಿನೋದ ರಘು ಮತ್ತು ಪವಿತ್ರ ಮಂಜುನಾಥ್ ನಾಮಪತ್ರ ಸಲ್ಲಿಸಿದ್ದರು. ಚನ್ನರಾಯಪಟ್ಟಣ ಸಹಕಾರ ಅಭಿವೃದ್ಧಿ ಅಧಿಕಾರಿ ವಿಜಯೇಂದ್ರ ಅವರು ಚುನಾವಣಾ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದರು.

ಕಳೆದ ವಾರ ಸಂಘದ ನಿರ್ದೇಶಕರಾಗಿ ಕಮಲಮ್ಮ ರಾಮಚಂದ್ರ, ಕಲಾ ದೊರೆಸ್ವಾಮಿ, ಭಾರತಿ ಕುಮಾರ್, ಮಂಜುಳ ಶಿವನಂಜೇಗೌಡ, ರಂಗಮ್ಮ ನಾಗರಾಜು, ಲತಾ ದಿನೇಶ್, ವಿನೋದ ರಘು, ಹೇಮಾ ಪೂರ್ಣಚಂದ್ರ, ಪವಿತ್ರ ಮಂಜುನಾಥ್, ಇಂದ್ರಮ್ಮ ಮಂಜಪ್ಪ, ಮಂಜುಳ ರಮೇಶ್ ಅವಿರೋಧ ಆಯ್ಕೆಯಾಗಿದ್ದರು.

ಹಾಸನ ಹಾಲು ಒಕ್ಕೂಟದ ಅಭಿವೃದ್ಧಿ ಅಧಿಕಾರಿ ದಯಾನಂದ, ಸಂಘದ ಕಾರ್ಯದರ್ಶಿ ಭಾರತಿ ಕುಮಾರ ಇದ್ದರು. ನೂತನ ಅಧ್ಯಕ್ಷರನ್ನು ಸಂಘದ ನಿರ್ದೇಶಕರು ಅಭಿನಂದಿಸಿದರು.

## ಜನಾಕರ್ಷಿಸಿದ ಭರತ ನಾಟ್ಯ ಪ್ರದರ್ಶನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಪಟ್ಟಣದ ಗಾಂಧಿ ವೃತ್ತದಲ್ಲಿರುವ ರಾಯರ ರಂಗ ಮಂದಿರದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗೆ ವಿಶೇಷ ಪೂಜೆ ಹಾಗೂ ಭರತ ನಾಟ್ಯ ಪ್ರದರ್ಶನ ಏರ್ಪಡಿಸಲಾಗಿತ್ತು.

ಅಖಿಲ ಭಾರತೀಯ ಸಂಗೀತ ನೃತ್ಯ ಕಲಾವಿದರ ಒಕ್ಕೂಟದಿಂದ ನಡೆದ ಭರತ ನಾಟ್ಯ ಪ್ರದರ್ಶನದಲ್ಲಿ ನಾಟ್ಯ ಭೈರವಿ ನೃತ್ಯ ಶಾಲೆ ಕಲಾವಿದರಾದ ಹಿತನ್ಯ, ಪ್ರೇಕ್ಷ, ಜೇನಿಷಾ, ಯಾಶಿಕ



ಅಮೋಘ ಪ್ರದರ್ಶನದ ಮೂಲಕ ಸಭೀಕರನ್ನು ರಂಜಿಸಿದರು. ಹಿರಿಯ ಗಮಕ ಕಲಾವಿದೆ ವಿದುಷಿ ಸುಮಿತ್ರ ಮತ್ತು ತಂಡದ ವತಿಯಿಂದ ಸಂಗೀತ ಕಾರ್ಯಕ್ರಮ ನೆರವೇರಿತು. ಮಂಜುನಾಥ್ ಅವರು ಎಲ್ಲಾ ಭಕ್ತರಿಗೆ ಶ್ರೀ ರಾಘವೇಂದ್ರ ಸ್ವಾಮೀಜಿ ಅವರ ಫೋಟೊ ಕೊಡುಗೆಯಾಗಿ ನೀಡಿದರು. ಭಕ್ತರಾದ ಆನಂದ್ ಕಾಳೇನಹಳ್ಳಿ, ಜಗದೀಶ್, ವಕೀಲ ಅಂಬರೀಶ್, ಪುರಿಭಟ್ಟಿ ಮಂಜಣ್ಣ, ಕಲಾವಿದರಾದ ರವೀಂದ್ರ, ಯೋಗೇಶ್, ಅರುಣ್, ಹರಿಕಥೆ ವಿದ್ವಾಂಸ ಲೋಕೇಶ್ ದಾಸ್, ಶ್ರೀಧರ್, ಜೀವನ್, ಸೂರ್ಯ ಪ್ರಕಾಶ್, ಮೋನಿಶ್ ಗೌಡ, ರಂಗಮಂದಿರದ ಮುಖ್ಯಸ್ಥ ಪ್ರಕಾಶ್ ಮತ್ತಿತರರಿದ್ದರು.

## ಪುರಸಭೆಯ ಘನತ್ಯಾಜ್ಯಕ್ಕೆ ಬೆಂಕಿ: ಕ್ರಮಕ್ಕೆ ಆಗ್ರಹ



ಸಕಲೇಶಪುರ: ಪಟ್ಟಣದ ಜಾತ್ರಾ ಮೈದಾನದಲ್ಲಿರುವ ಪುರಸಭೆಯ ಘನತ್ಯಾಜ್ಯಕ್ಕೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದು ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದ್ದರಿಂದ ಭಾರೀ ಅನಾಹುತ ತಪ್ಪಿದೆ. ಸಾವಿರಾರು ಲಾರಿ ಲೋಡ್ ಗಳ ಪುರಸಭೆಯ ಘನತ್ಯಾಜ್ಯವನ್ನು ಸುರಿಯಲಾಗಿದ್ದು ಕಿಡಿಗೇಡಿಗಳು ಗುರುವಾರ ರಾತ್ರಿ ಕಸದ ರಾಶಿಗೆ ಬೆಂಕಿ ಹಾಕಿರುವುದು ಅನುಮಾನಗಳಿಗೆ ಕಾರಣವಾಗಿದೆ.

ಕಸದ ರಾಶಿಗೆ ಬೆಂಕಿ ಹಚ್ಚಿದ್ದರಿಂದ ಬೆಂಕಿ ಹರಡಿ ಸುತ್ತಮುತ್ತಲಿನ ಗ್ಯಾರೇಜ್ ಗಳು ಹಾಗೂ ಮನೆಗಳಿಗೂ ಸಹ ಬೆಂಕಿ ಹರಡಿ ಅನಾಹುತ ಸಂಭವಿಸುವ ಸಾಧ್ಯತೆಯಿತ್ತು. ಆದರೆ ಅಗ್ನಿಶಾಮಕ ದಳದವರು ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಿರುವುದರಿಂದ ಹೆಚ್ಚಿನ ಅನಾಹುತ ತಪ್ಪಿದೆ. ಕಸದ ರಾಶಿಗೆ ಬೆಂಕಿ ಹಬ್ಬಿದ್ದರಿಂದ ಪ್ಲಾಸ್ಟಿಕ್ ಸೇರಿದಂತೆ ಇತರ ವಿಷಕಾರಿ ಪದಾರ್ಥಗಳು ಉರಿದು ಬಡಾವಣೆಯ ನಿವಾಸಿಗಳು ಕೆಟ್ಟ ಗಾಳಿಯನ್ನು ಸೇವಿಸುವಂತಾಯಿತು. ಪದೇ ಪದೇ ಕಸದ ರಾಶಿಗೆ ಬೆಂಕಿ ಬೀಳುತ್ತಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಕೂಡಲೆ ಕಸದ ರಾಶಿಗೆ ಬೆಂಕಿ ಹಾಕುವವರ ವಿರುದ್ಧ ದೂರು ದಾಖಲಿಸಿ ಸೂಕ್ತ ತನಿಖೆ ಮಾಡಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ.

## ಕಸಬಾ ಕೃಷಿ ಪತ್ತಿನ ಸಂಘಕ್ಕೆ ನಿಖಿಲ್ ನಿರ್ದೇಶಕ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ನಿಖಿಲ್ ಹಲಸುಲಿಗೆ ಗೆಲುವು ಸಾಧಿಸಿದ್ದಾರೆ.



ಸಾಲಗಾರಲ್ಲದ ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದ ಬಿಜೆಪಿ ಯುವ ಮೋರ್ಚಾ ತಾಲ್ಲೂಕು ಅಧ್ಯಕ್ಷ ನಿಖಿಲ್ ಹಲಸುಲಿಗೆ ವಿಜಯ ಸಾಧಿಸಿದ್ದಾರೆ. ಸಾಲಗಾರಲ್ಲದ ಸಾಮಾನ್ಯ ಕ್ಷೇತ್ರದ ಒಂದು ಸ್ಥಾನಕ್ಕೆ ನಾಲ್ವರು ನಾಮಪತ್ರ ಸಲ್ಲಿಸಿದ್ದರು. ನಿಖಿಲ್ 183 ಮತ ಪಡೆಯುವ ಮೂಲಕ ಪ್ರತಿಸ್ಪರ್ಧಿಗಿಂತ 85 ಮತಗಳ ಅಂತರದಲ್ಲಿ ಗೆಲುವು ಸಾಧಿಸಿದ್ದಾರೆ. ನಿಖಿಲ್ ಅವರ ಗೆಲುವಿಗೆ ಶಾಸಕ ಸಿಮೆಂಟ್ ಮಂಜು, ಬಿಜೆಪಿ ತಾಲ್ಲೂಕು ಅಧ್ಯಕ್ಷ ವಳಲಹಳ್ಳಿ ಅಶ್ವತ್ಥ್ ಸೇರಿ ಇತರ ಮುಖಂಡರು ಅಭಿನಂದನೆ ಸಲ್ಲಿಸಿದ್ದಾರೆ.

# ಸಾರ್ವಜನಿಕ ರಸ್ತೆ ಕಬಳಿಕೆಗೆ ಯತ್ನ ಆರೋಪ: ಪ್ರತಿಭಟನೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಖಾಸಗಿ ನಿವೇಶನಕ್ಕಾಗಿ ಸಾರ್ವಜನಿಕ ರಸ್ತೆಯಲ್ಲಿದ್ದ ಬಂಡೆ ಒಡೆಯಲು ಸಿಡಿಮದ್ದು ಬಳಸಿ ಸ್ಫೋಟಗೊಳಿಸಿದ ಪರಿಣಾಮ ಸುತ್ತಲಿನ ಮನೆ, ದೇವಸ್ಥಾನದ ಗೋಡೆ ಬಿರುಕು ಬಿಟ್ಟಿದೆ ಎಂದು ಆರೋಪಿಸಿ ತಾಲ್ಲೂಕಿನ ಎಸ್. ಸೂರಾಪುರ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಸರ್ವೆ ನಂ. 108ರ ಸುಪ್ರೀತ್ ಕುಮಾರ್ ಎಂಬುವರಿಗೆ ಸೇರಿದ ಎರಡು ಎಕರೆ ಜಾಗದಲ್ಲಿ ಹಾಸನದ ಇಬ್ಬರು ಲೇಔಟ್ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಒಳ ಚರಂಡಿ ನಿರ್ಮಿಸುವ ಸಲುವಾಗಿ ಸುಮಾರು ಇಪ್ಪತ್ತು ಅಡಿ ಆಳ ಅಗೆಯುತ್ತಿದ್ದಾಗ ಮದ್ಯದಲ್ಲಿ ಸಿಕ್ಕ ಬೃಹತ್ ಗಾತ್ರದ ಬಂಡೆಯನ್ನು ಸಿಡಿ ಮದ್ದು ಬಳಸಿ ಪುಡಿ ಮಾಡಿದ ಶಬ್ದಕ್ಕೆ ಸುತ್ತಮುತ್ತಲಿನ ಮನೆಗಳಿಗೆ ಹಾನಿಯಾಗಿದೆ. ಅದರಿಂದ ಗೃಹೋಪಯೋಗಿ ವಸ್ತುಗಳು ಹಾನಿಗೀಡಾಗಿವೆ ಎಂದರು.

ಗ್ರಾಮದ ಚಂದ್ರು ಮಾತನಾಡಿ, ನಾವೆಲ್ಲ ಸುಮಾರು ಇಪತ್ತು ವರ್ಷಗಳ ಹಿಂದೆ ಮುಳುಗಡೆ ಪ್ರದೇಶದಿಂದ ಇಲ್ಲಿಗೆ ಬಂದು ವಾಸಿಸುತ್ತಿದ್ದೇವೆ. ಸುಸಜ್ಜಿತ ಮನೆಗಳಿಲ್ಲದಿದ್ದರೂ ಇರುವುದರಲ್ಲೇ ಹೊಂದಾಣಿಕೆ ಜೀವನ ನಡೆಸುತ್ತಿದ್ದೇವೆ. ಹಾಲು, ಮೊಸರು ಮಾರಾಟದ ಮೂಲಕ ಬದುಕು ಕಟ್ಟಿಕೊಂಡಿರುವ ನಮಗೆ ಈಗ ಆಘಾತವಾಗಿದೆ. ಬಡಕುಟುಂಬಗಳಿಗೆ ಆಗುತ್ತಿರುವ ಅನ್ಯಾಯ ತಪ್ಪಿಸಬೇಕು ಎಂದು ಆಗ್ರಹಿಸಿದರು.


ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅನುಮತಿ ಪಡೆಯದೆ ಬಂಡೆ ಸಿಡಿಸಿದ್ದಾರೆ. ನಮ್ಮ ಮನೆಗಳಿಗೆ ಅಪಾರ ನಷ್ಟವಾಗಿದೆ. ಜಿಲ್ಲಾಡಳಿತ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದರು.

ರಮೇಶ್ ಮಾತನಾಡಿ, ಯಾವುದೇ ನಿವೇಶನ ನಿರ್ಮಿಸಲು ಅನುಮತಿ ಕಡ್ಡಾಯ. ಅಲ್ಲದೆ ನಿವೇಶನ ಪಕ್ಕದಲ್ಲಿ ಕೇವಲ ಐವತ್ತು ಮೀಟರ್ ಪಕ್ಕದಲ್ಲೇ ಮನೆ, ದೇವಸ್ಥಾನ, ಮುರಾರ್ಜಿ ದೇಸಾಯಿ ವಸತಿ ಶಾಲೆ, ಯಗಚಿ ಹಿನ್ನೀರು ಪ್ರದೇಶವಿದೆ. ಇಂತಹ ಸ್ಥಳದಲ್ಲಿ ನಾವುಗಳು ಜಮೀನಿಗೆ ಹೋಗುವ ನಕಾಶೆ ರಸ್ತೆಯನ್ನೇ ಅಗೆದು ಒಳಚರಂಡಿ ನಿರ್ಮಿಸುವ ಸಲುವಾಗಿ ಮದ್ಯದಲ್ಲಿ ಸಿಕ್ಕ ಬಂಡೆಯನ್ನು ಸಿಡಿಸಲು ಸಿಡಿ ಮದ್ದನ್ನು ಉಪಯೋಗಿಸಿದ್ದಾರೆ ಎಂದು ಆರೋಪಿಸಿದರು.

ಮಹಿಳೆಯರು ಮಾತನಾಡಿ, ನಾವೆಲ್ಲ ಗದ್ದೆ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದೇವೆ. ಮುಳುಗಡೆ ಸಮಸ್ಯೆ ಇನ್ನೂ ಬಗೆಹರಿದಿಲ್ಲ. ಅಷ್ಟರೊಳಗೆ ನಿವೇಶನ ನಿರ್ಮಿಸುತ್ತಿರುವ ಮಾಲೀಕರ ಕಾಟ ಹೆಚ್ಚಾಗಿದೆ. ಅವರನ್ನು ಕೇಳಿದರೆ ಉಡಾಫೆಯಿಂದ ವರ್ತಿಸುತ್ತಾರೆ. ರಸ್ತೆಯಲ್ಲಿ ತಿರುಗಾಡಲು ಬಿಡುತ್ತಿಲ್ಲ, ಅಧಿಕಾರಿಗಳು ಸಮಸ್ಯೆಗೆ ಪರಿಹಾರ ಕಲ್ಪಿಸದಿದ್ದರೆ ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಗ್ರಾಮಸ್ಥರಾದ ತುಂಗಾ, ಮಮತಾ, ಜಯಂತಿ, ಕೋಮಲ, ಧರ್ಮವತಿ, ರವಿ ಪಾಪಣ್ಣ, ಸುನಿತಾ, ಪರಶುರಾಮ್, ಕೇಶವಮೂರ್ತಿ, ಶೇಖರ್, ರಾಜೇಗೌಡ ಹಾಗೂ ಇತರರಿದ್ದರು.

# ಸಾಮರಸ್ಯ ಜೀವನಕ್ಕೆ ದೇಗುಲಗಳು ಪೂರಕ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ಸಾಮೂಹಿಕ ಆಚರಣೆಗಳಿಂದ ಸಮಾಜದಲ್ಲಿ ಒಗ್ಗಟ್ಟು ಮೂಡುವುದರೊಂದಿಗೆ ಸಾಮರಸ್ಯದ ಜೀವನಕ್ಕೂ ವೇದಿಕೆಯಾಗಲಿದೆ ಎಂದು ರಂಭಾಪುರಿ ವೀರಸಿಂಹಾಸನ ಶಾಖಾ ಶ್ರೀ ಸಂಸ್ಥಾನ ಹಿರೇಮಠ ಕಾರ್ಜುವಳ್ಳಿಯ ಪೀಠಾಧ್ಯಕ್ಷ ಶ್ರೀ ಸದಾಶಿವ ಸ್ವಾಮೀಜಿ ಹೇಳಿದರು.

ಪಾಳ್ಯ ಹೋಬಳಿ ಗುಂಡನಬೆಟ್ಟೂರು ಗ್ರಾಮದಲ್ಲಿ ಮಲ್ಲೇಶ್ವರಸ್ವಾಮಿ ದೇವಾಲಯ ಜೀರ್ಣೋದ್ಧಾರ ಮತ್ತು ಜಂಪೋತ್ಸವ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ಮನುಷ್ಯ ತಮ್ಮಲ್ಲಿರುವ ದ್ವೇಷ, ಅಸೂಯೆಗಳನ್ನು ಬದಿಗೊತ್ತಿ ನಾವೆಲ್ಲರೂ ಒಂದೇ ಎಂಬ ಭಾವನೆಯನ್ನು ಮೂಡಿಸಿಕೊಳ್ಳಬೇಕು. ಧರ್ಮ ಮಾರ್ಗದಲ್ಲಿ ಸಾಗಿದರೆ ಮನುಷ್ಯನಿಗೆ ಸಹಜವಾಗಿಯೇ ಶಾಂತಿ, ನೆಮ್ಮದಿ ದೊರಕುತ್ತದೆ. ಗ್ರಾಮಗಳಲ್ಲಿರುವ ದೇವಸ್ಥಾನಗಳು ಮನುಷ್ಯರಿಗೆ ಶಾಂತಿ-ನೆಮ್ಮದಿ ನೀಡುವ ಧಾರ್ಮಿಕ ಕೇಂದ್ರಗಳಾಗಿವೆ ಎಂದರು.

ಶಾಸಕ ಸಿಮೆಂಟ್ ಮಂಜು ಮಾತನಾಡಿ, ದೇವಾಲಯ ನಿರ್ಮಾಣ ಮಾಡುವುದು ಸುಲಭದ ಕಾರ್ಯವಲ್ಲ. ನೂತನ ದೇವಾಲಯ ನಿರ್ಮಾಣಗಳಿಂದ ಧಾರ್ಮಿಕ ಶ್ರದ್ದೆ, ಭಕ್ತಿ ಮತ್ತು ಸಂಸ್ಕೃತಿಗಳ ಪುನರುತ್ಥಾನವಾಗುತ್ತದೆ. ಪೂರ್ವಿಕರು ಆಚರಿಸಿ ಬೆಳೆಸಿಕೊಂಡು ಬಂದಿರುವ ಸಂಸ್ಕಾರಯುತ ಕಾರ್ಯಗಳನ್ನು ನಾವು ನಮ್ಮ ಮುಂದಿನ ಪೀಳಿಗೆಗೆ ಪರಿಚಯಿಸಬೇಕು. ಯಾವುದೇ ದೇವಾಲಯಗಳ ನಿರ್ಮಾಣದ ನಂತರ ದೇವಾಲಯಗಳಲ್ಲಿ ಪೂಜೆ ಪುನಸ್ಕಾರಗಳೊಂದಿಗೆ ಅದರ ನಿರ್ವಹಣೆ ಕಾರ್ಯ ವ್ಯವಸ್ಥಿತವಾಗಿರಬೇಕು. ಪ್ರತಿಯೊಬ್ಬರೂ ದೇವರು, ಗುರು ಹಿರಿಯರನ್ನು ಪೂಜಿಸಿ ಗೌರವಿಸುವುದರೊಂದಿಗೆ ಉತ್ತಮ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದರು.

ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರಸ್ವಾಮೀಜಿ ಮಾತನಾಡಿ, ಯಾವುದೇ ಗ್ರಾಮಕ್ಕೆ ಕಾಲಿಟ್ಟರೂ ಗ್ರಾಮಸ್ಥರ ಶಕ್ತಿಗನುಸಾರ ಒಂದು ದೇವಾಲಯದ ಜೀರ್ಣೋದ್ದಾರ ದೃಶ್ಯಗಳನ್ನು ಕಾಣಬಹುದು. ಇದು ಜನ ದೇವರ ಬಗ್ಗೆ ಇಟ್ಟಿರುವ ನಂಬಿಕೆ ಹಾಗೂ ಭಕ್ತಿ ತೋರಿಸುತ್ತದೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಮಾತನಾಡಿ, ಸನಾತನ ಧರ್ಮ, ಸಂಸ್ಕೃತಿಯ ಪ್ರತೀಕವಾದ ಮಠಮಾನ್ಯಗಳು ಹಾಗೂ ಧಾರ್ಮಿಕ ಕೇಂದ್ರಗಳಾದ ದೇವಾಲಯಗಳು, ಮನುಷ್ಯನಿಗೆ ಸುಖ, ಶಾಂತಿ, ನೆಮ್ಮದಿ ಕರುಣಿಸುವ ಶ್ರದ್ಧಾ ಕೇಂದ್ರಗಳಾಗಿವೆ ಎಂದರು.

ಸಂಕ್ಲಾಪುರ ಮಠದ ಶ್ರೀ ಧರ್ಮರಾಜೇಂದ್ರ ಸ್ವಾಮೀಜಿ, ಸಂಸದ ಶ್ರೇಯಸ್ ಪಟೇಲ್, ಮಾಜಿ ಶಾಸಕ ಹೆಚ್.ಕೆ. ಕುಮಾರಸ್ವಾಮಿ, ಕೆ.ಎಸ್. ಮಂಜೇಗೌಡ, ಹೆಮ್ಮಿಗೆ ಮೋಹನ್, ಜಿಲ್ಲಾ ಸಹಕಾರ ಒಕ್ಕೂಟಗಳ ಅಧ್ಯಕ್ಷ ಎಸ್.ಎನ್. ಪ್ರಕಾಶ್, ಬಸವಣ್ಣ, ಬಿ. ರೇಣುಕಾ ಪ್ರಸಾದ್, ಡಾ. ಜಯರಾಜ್, ಅಜಿತ್ ಚಿಕ್ಕಕಣಗಾಲ್, ಬಿ.ಡಿ. ಧರ್ಮಪ್ಪ, ಸಂದೀಪ ಇತರರಿದ್ದರು.

# ವೃತ್ತಿಪರ ಕೌಶಲದಿಂದ ಉದ್ಯೋಗ: ಪ್ರೀತಂ ಗೌಡ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಆವಿಷ್ಕಾರ ನಡೆಯುತ್ತಿದೆ. ಯುವಕರು ಶಿಕ್ಷಣದ ಜೊತೆಗೆ ವೃತ್ತಿಪರ ಕೌಶಲ ಕಲಿಯುವುದರಿಂದ ಶಿಕ್ಷಣದ ಮುಗಿಸಿದ ತಕ್ಷಣವೇ ಉದ್ಯೋಗ ಪಡೆದುಕೊಳ್ಳಬಹು ಎಂದು ಮಾಜಿ ಶಾಸಕ ಪ್ರೀತಂ ಜೆ. ಗೌಡ ಹೇಳಿದರು.

ನಗರದ ಕುವೆಂಪುನಗರ ಬಡಾವಣೆಯಲ್ಲಿ ನೂತನವಾಗಿ ಆರಂಭವಾಗಿರುವ ಐ ಬ್ರಿಡ್ಜ್ 360 ಎಜುಕೇಟ್ ಪ್ರೈವೆಟ್ ಲಿ. ಸಂಸ್ಥೆಯ ಹಾಸನ ಶಾಖಾ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ಬಹಳಷ್ಟು ಮಂದಿ ಯುವಕರು ಶಿಕ್ಷಣ ಮುಗಿಸಿದ ನಂತರ ಉದ್ಯೋಗಕ್ಕಾಗಿ ಬೆಂಗಳೂರಿನಲ್ಲಿ ಅಲೆದಾಡುವುದನ್ನು ಇಂದಿಗೂ ನಾವು ಕಾಣುತ್ತಿದ್ದೇವೆ. ಐ.ಟಿ. ಕ್ಷೇತ್ರದಲ್ಲಿ ವೃತ್ತಿ ಆರಂಭಿಸಲು ಕನಸು ಕಾಣುತ್ತಿರುವ ಯುವಕರಿಗೆ ಸಹಾಯವಾಗುವ ನಿಟ್ಟಿನಲ್ಲಿ ನಗರದಲ್ಲಿ ಐ ಬ್ರಿಡ್ಜ್ 360 ಸಂಸ್ಥೆ ಆರಂಭವಾಗಿರುವುದು ಸಂತಸದ ಸಂಗತಿ ಎಂದರು.

ಐ ಬ್ರಿಡ್ಜ್ 360 ಸಂಸ್ಥೆ ಈಗಾಗಲೇ ಯುವಕರಿಗೆ ಕೌಶಲ್ಯ ನೀಡಿ ಅವರಿಗೆ ಸೂಕ್ತ ತರಬೇತಿ ನೀಡಿ ಉದ್ಯೋಗವಕಾಶ ಕಲ್ಪಿಸಿಕೊಡುವ ಸಂಸ್ಥೆಗಳ ಪೈಕಿ ಮುಂಚೂಣಿಯಲ್ಲಿದೆ. ಜಿಲ್ಲೆಯ ಯುವಕರು ಈ ಸಂಸ್ಥೆಯ ಸೌಲಭ್ಯ ಬಳಕೆ ಮಾಡಿಕೊಳ್ಳಬಹುದಾಗಿದೆ. ಜಿಲ್ಲಾಮಟ್ಟದಲ್ಲಿ ಇಂತಹ ಸಂಸ್ಥೆಗಳು ಕಾರ್ಯನಿರ್ವಹಿಸುವುದರಿಂದ ಇಂಜಿನಿಯರಿಂಗ್, ಬಿಸಿಎ ಹಾಗೂ ಇನ್ನಿತರೆ ಪದವಿ ಪಡೆಯುವ ಯುವಕರಿಗೆ ಸಹಕಾರಿಯಾಗಲಿದೆ.

ಈಗಾಗಲೇ ಈ ಸಂಸ್ಥೆಯು ವಾರ್ಷಿಕವಾಗಿ ಇಂತಿಷ್ಟು ಮಂದಿಗೆ ತರಬೇತಿ ನೀಡಿ ಅವರನ್ನು ಐ.ಟಿ. ಕ್ಷೇತ್ರದ ಉದ್ಯೋಗಿಗಳನ್ನಾಗಿ ಮಾಡುವ ಗುರಿ ಹೊಂದಿದ್ದು, ಸಂಸ್ಥೆಯ ಒಳ್ಳೆಯ ಕೆಲಸಗಳಿಗೆ ತಾವು ಬೆಂಬಲವಾಗಿ ನಿಲ್ಲುತ್ತೇವೆ ಎಂದರು.

# ನಾಳೆ ಗೊರುಚ ದತ್ತಿನಿಧಿ ಪ್ರಶಸ್ತಿ ಪ್ರದಾನ




ಹಾಸನ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ಮೇ 18 ರಂದು ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ ಗೊರುಚ ದತ್ತಿನಿಧಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲ್ಲೂಕು ಅಧ್ಯಕ್ಷ ಕಟ್ಟಾಯ ಶಿವಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ಕಾರ್ಯಕ್ರಮ ಆರಂಭವಾಗಲಿದ್ದು, ಹಾರನಹಳ್ಳಿ ಕೋಡಿಮಠದ ಶ್ರೀ ಡಾ.ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ, ಸಾಹಿತಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡುವರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಡಾ.ಸಿ.ಸೋಮಶೇಖರ ಅಧ್ಯಕ್ಷತೆ ವಹಿಸುವರು, ಹಾಸನ ಜಿಲ್ಲಾ ಕಸಾಪ ಅಧ್ಯಕ್ಷ ಡಾ.ಹೆಚ್.ಎಲ್.ಮಲ್ಲೇಶಗೌಡ ಅಭಿನಂದನಾ ನುಡಿಗಳನ್ನಾಡುವರು. ದತ್ತಿ ದಾಸೋಹಿಗಳಾದ ಗೊರುಚ ಅವರು ಗೌರವ ಉಪಸ್ಥಿತರಿರುವರು ಎಂದರು.

# ಪೊಲೀಸ್ ಠಾಣೆಯಲ್ಲೇ ವ್ಯಕ್ತಿ ಅಸ್ವಸ್ಥ: ಸಾವು

ಹಾಸನ: ಕೌಟುಂಬಿಕ ಕಲಹದಿಂದ ಹೆಂಡತಿ ಜೊತೆಗೆ ಜಗಳವಾಡಿ ಠಾಣೆಗೆ ಬಂದಿದ್ದ ವ್ಯಕ್ತಿ ತೀವ್ರ ಅಸ್ವಸ್ಥನಾಗಿ ಮೃತಪಟ್ಟಿದ್ದಾನೆ. ನಗರದ ದಾಸರಕೊಪ್ಪಲು ನಿವಾಸಿ ಮಂಜೇಗೌಡ (45) ಮೃತರು. ಮದ್ಯ ವ್ಯಸನಿಯಾಗಿದ್ದ ಮಂಜೇಗೌಡನಿಂದ ಬೇಸತ್ತಿದ್ದ ಪತ್ನಿ ರುಕ್ಮಿಣಿ 112 ಸಹಾಯವಾಣಿಗೆ ಕರೆ ಮಾಡಿ ದೂರು ನೀಡಿದ್ದರು. ಸ್ಥಳಕ್ಕೆ ತೆರಳಿದ್ದ ಪೊಲೀಸರು ದಂಪತಿಗಳಿಬ್ಬರನ್ನು ಠಾಣೆಗೆ ಕರೆತಂದು ವಿಚಾರಣೆ ನಡೆಸುತ್ತಿದ್ದರು. ಮಂಜೇಗೌಡ ಅವರು ಏಕಾಏಕಿ ಅಸ್ವಸ್ಥರಾಗಿ ಕುಸಿದು ಬಿದ್ದಿದ್ದು ತಕ್ಷಣವೇ ಅವರನ್ನು ಹಿಮ್ಸ್‌ಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ.

ವಿಚಾರಣೆಗಾಗಿ ಬಂದಿದ್ದ ಮಂಜೇಗೌಡರ ಮೇಲೆ ಪೊಲೀಸರು ಹಲ್ಲೆ ನಡೆಸಿದ್ದಾರೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ. ಆದರೆ ಕುಟುಂಬಸ್ಥರು ಯಾವುದೇ ದೂರು ದಾಖಲಿಸಿಲ್ಲ ಎಂದು ತಿಳಿದುಬಂದಿದೆ.

# ಕತ್ತಿ ತೋರಿಸಿ ಚಿನ್ನದ ಸರ ದೋಚಿದ ಖದೀಮ

ಆಲೂರು: ಚಲಿಸುತ್ತಿದ್ದ ಬೈಕ್‌ಗೆ ಹಿಂದಿನಿಂದ ಬಂದು ಡಿಕ್ಕಿ ಮಾಡಿದ ವ್ಯಕ್ತಿಯೊಬ್ಬ ಮಹಿಳೆಯನ್ನು ಹೆದರಿಸಿ 30 ಗ್ರಾಂ ತೂಕದ ಚಿನ್ನದ ಸರ ಹಾಗೂ ಮೊಬೈಲ್ ಕಿತ್ತುಕೊಂಡು ಹೋಗಿರುವ ಘಟನೆ ತಾಲ್ಲೂಕಿನ ಹೊಸಕೋಟೆ-ಶಿರಗಾವರ ಮಾರ್ಗಮಧ್ಯೆ ಬುಧವಾರ ನಡೆದಿದೆ.

ಕೆ. ಹೊಸಕೋಟೆ ಹೋಬಳಿ ಹೊಸಮಠ ಗ್ರಾಮದ ಲೋಲಾಕ್ಷಿ ಅವರು ತಮ್ಮ ಸಹೋದರಿ ಮಗ ಪ್ರೀತಂ ಅವರೊಂದಿಗೆ ಸ್ವಸಹಾಯ ಸಂಘಕ್ಕೆ ಸಹಿ ಮಾಡಲು ಬೈಕ್‌ನಲ್ಲಿ ತೆರಳುತ್ತಿದ್ದಾಗ ಹಿಂದಿನಿಂದ ಬಂದ ಅಪರಿಚಿತ ಡಿಕ್ಕಿ ಮಾಡಿದ್ದಾನೆ. ಬೈಕ್‌ಗೆ ಹಾನಿಯಾಗಿದ್ದರಿಂದ ಪ್ರೀತಂ ಗಲಾಟೆ ಮಾಡುತ್ತಿದ್ದಂತೆ ಬಂದಿರುವ ಆತ ಕತ್ತಿಯಿಂದ ಹೆದರಿಸಿದ್ದಾನೆ. ಪ್ರೀತಂನನ್ನು ಹಿಡಿದು ಕೊರಳಲ್ಲಿರುವ ಚಿನ್ನದ ಸರ ಕೊಡದಿದ್ದರೆ ಪ್ರೀತಂನನ್ನು ಕೊಲ್ಲುವುದಾಗಿ ಬೆದರಿಸಿದ್ದಾನೆ. ಗಾಬರಿಗೊಂಡ ಲೋಲಾಕ್ಷಿ 1.70 ಲಕ್ಷ ರೂ. ಮೌಲ್ಯದ ಸರ ಬಿಚ್ಚಿಕೊಟ್ಟಿದ್ದಾರೆ. ನಂತರ ಮೊಬೈಲ್ ಅನ್ನು ಕಿತ್ತುಕೊಂಡಿದ್ದಾನೆ. ಕಳ್ಳತನ ಉದ್ದೇಶದಿದಲೇ ಬಂದಿದ್ದ ಆತನ ಬೈಕ್‌ಗೆ ನಂಬರ್ ಪ್ಲೇಟ್ ಸಹ ಇರಲಿಲ್ಲ ಎನ್ನಲಾಗಿದೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಅಪಘಾತ: ಬೈಕ್ ಸವಾರ ಸಾವು

ಬೇಲೂರು: ತಾಲ್ಲೂಕಿನ ಚಿಲ್ಕೂರು ಹೊಸಹಳ್ಳಿ ಗೇಟ್ ಬಳಿ ಗುರುವಾರ ಬೈಕ್ ಹಾಗೂ ಕಾರು ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಲ್ಲಿ ಬೈಕ್ ಸವಾರ ಮೃತಪಟ್ಟಿದ್ದಾರೆ.

ತಾಲ್ಲೂಕಿನ ಈರಗುಪ್ಪೆ ಗ್ರಾಮದ ಚಂದ್ರಶೇಖರ್ ಮೃತರು. ಬೇಲೂರಿನಿಂದ ಈರಗುಪ್ಪೆ ಗ್ರಾಮಕ್ಕೆ ತೆರಳುತ್ತಿದ್ದಾಗ ಎದುರುಗಡೆಯಿಂದ ವೇಗವಾಗಿ ಬಂದ ಕೇರಳ ಮೂಲದ ಕಾರು ಡಿಕ್ಕಿಯಾಗಿದೆ. ತೀವ್ರ ರಕ್ತಸ್ರಾವವಾಗಿ ಚಂದ್ರಶೇಖರ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಪಟ್ಟಣ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.

# ಇತಿಹಾಸದಲ್ಲಿ ಈ ದಿನ

## ಮೇ -17

1540: ಮುಘಲ್ ಸುಲ್ತಾನಿ ಬಾಬರ್‌ನ ಮಗು ಹಮ್ಮಾಯೂನ್, ಬಿಲಗ್ರಾಮ್ ಯುದ್ಧದಲ್ಲಿ ಶೇರ್ ಶಾ ಸೂರಿ ಬಳಿ ಸೋಲನುಭವಿಸಿದನು.

1792: ನ್ಯೂಯಾರ್ಕ್ ಸ್ಟಾಕ್ ಎಕ್ಸ್‌ಚೇಂಜ್ ಸ್ಥಾಪನೆಯಾತು.

1951: ಅಮೆರಿಕಾದಲ್ಲಿ ಕಂಪ್ಯೂಟರ್‌ನ ಪ್ರಥಮ ವಾಣಿಜ್ಯಿಕ ಮಾದರಿ ಖಿಫೆಐಙಅಇಐ ಅನ್ನು Census Bureau ಗೆ ನೀಡಲಾಯಿತು.

1954: ಅಮೆರಿಕದ ಸುಪ್ರೀಂ ಕೋರ್ಟ್, ಆಟಟಙ್ಲ ಡ. ಆಟಚ್ಟಥ ಟ್ಥ ಉಥ್ಛಚಿಚಿಜಿಟ್ಟ ತೀರ್ಪಿನಲ್ಲಿ ಶಾಲೆಗಳಲ್ಲಿ ಜಾತೀಯ ವಿಭಜನೆ ಅಸಂವಿಧಾನಿಕ ಎಂದು ಘೋಷಿಸಿತು.

1974: ಜಪಾನ್‌ನ ಟೋಕಿಯೋ ನಾರಿತಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಕಾರ್ಯಾರಂಭವಾಯಿತು.

1990: ವಿಶ್ವ ಆರೋಗ್ಯ ಸಂಸ್ಥೆ ಹೋಮೋಸೆಕ್ಸು ವಾಲಿಟಿಯನ್ನು ಮಾನಸಿಕ ರೋಗಗಳ ಪಟ್ಟಿಯಿಂದ ತೆಗೆದುಹಾಕಿತು.

### ಜನನ

1866: ಎರಿಕ್ ಸತ್ಯರ್, ಫ್ರೆಂಚ್ ಸಂಗೀತಗಾರ.

1911: ಮಹೇಂದ್ರ ವಿಕ್ರಮಾ, ಶ್ರೀಲಂಕಾದ ರಾಜಕೀಯ ನಾಯಕ.

1936: ಡೆನಿಸ್ ಹೋಪರ್, ಅಮೆರಿಕದ ನಟ.

1961: ಎನ್ಯಾ, ಐರಿಶ್ ಸಂಗೀತ ಕಲಾವಿದ.

1973: ಡೀಸ್ಟಿನ್ ಹೋಫ್ಮನ್, ಅಮೆರಿಕದ ಚಲನಚಿತ್ರ ನಿರ್ಮಾಪಕ.

1981: ಲೀನ್ ಬಾಕರ್, ಇಂಗ್ಲೆಂಡ್ ಕ್ರಿಕೆಟ್ ಆಟಗಾರ್ತಿ.

### ಮರಣ

1510: ಸ್ಯಾಂಡ್ರೋ ಬೋಟಿಚೆಲ್ಲಿ, ಇಟಾಲಿಯನ್ ಚಿತ್ರಕಾರ.

1729: ಸೈಮನ್ ವಾನ್ ಡರ್ ಮೆರ್, ಡಚ್ ವಿಜ್ಞಾನಿ.

1992 ಲಾರೆನ್ಸ್ ಕರ್, ಅಮೆರಿಕದ ರಾಜಕಾರಣಿ.

2012: ಡೊನ್ನಾ ಸಮರ್, ಅಮೆರಿಕನ್ ಗಾಯಕಿ.

# ಆರೋಗ್ಯ ಶಾಸ್ತ್ರದ ಜನಕ ಭಾರತ, ಆದರೆ?



– ಚೇತನ್ ಗುರೂಜಿ,
ಬಸವ ಯೋಗ ಕೇಂದ್ರ, ಅಡಗೂರು

ಮನುಷ್ಯನ ಸೃಷ್ಟಿಯಾದ ನಂತರ ಹೇಗೆ ಅವನ ಜೀವನ ಪದ್ಧತಿ ಇದ್ದರೆ ಆರೋಗ್ಯದಿಂದ ಇರಬಹುದು ಎಂಬುದನ್ನು ಇಡೀ ವಿಶ್ವಕ್ಕೆ ತಿಳಿಸಿದ್ದೆ ಭಾರತ. ಅದೇನೋ ಗೊತ್ತಿಲ್ಲ ಇಲ್ಲಿನ ಮಣ್ಣು, ಗಾಳಿ, ನೀರು ಹಾಗೆ ಭರತ ಖಂಡದ ಭೂ ಪ್ರದೇಶ ಒಂದು ರೀತಿಯಲ್ಲಿ ಆರೋಗ್ಯ ಮತ್ತು ಆಧ್ಯಾತ್ಮದ ತವರು ಎಂದರು ತಪ್ಪಾಗಲಿಕ್ಕಿಲ್ಲ. ಅಷ್ಟು ಜ್ಞಾನಿಗಳು, ಸಂತರು, ಮಹಾತ್ಮರು ಹುಟ್ಟಿದ್ದು ಜೊತೆಗೆ ಪತಂಜಲಿ ಮಹರ್ಷಿಗಳು, ವಾಗ್ಬಟ, ಚರಕ, ಶುಶ್ರುತ, ಋಷಿ ಮುನಿಗಳು, ಜನ್ಮ ತಾಳಿದಂತಹ ಸ್ಥಳವಿದು. ಇಂತಹ ಆರೋಗ್ಯ ಮತ್ತು ಆಧ್ಯಾತ್ಮದ ತವರು ದೇಶದಲ್ಲಿ ಜನ್ಮತಾಳಿದ ನಾವೆಲ್ಲರೂ ಪುಣ್ಯವಂತರೇ ಸರಿ. ಈಗ ನಾವು ಎತ್ತಕಡೆ ಸಾಗುತ್ತಿದ್ದೇವೆ ಎಂಬುದನ್ನು ಚಿಂತಿಸುವ ಸ್ಥಿತಿಗೆ ಬಂದು ತಲುಪಿದ್ದೇವೆ. ಅದರಲ್ಲೂ ಆರೋಗ್ಯ ಕ್ಷೇತ್ರದಲ್ಲಿ ಬಹಳಷ್ಟು ಕುಸಿತವನ್ನು ಕಾಣುತ್ತಿದ್ದೇವೆ.

### ಅಮೃತ ಬಿಟ್ಟು ವಿಷ ಹುಡುಕುವ ಕೆಲಸ

ನಮ್ಮ ಬಳಿ ಇರುವ ಅಮೃತವನ್ನು ಬಿಟ್ಟು ವಿಷವನ್ನು ಹುಡುಕುತ್ತಾ ಹೊರಟಿದ್ದೇವೆ. ಆದ್ದರಿಂದಲೇ ವಿಶ್ವದಲ್ಲಿ ಹೆಚ್ಚು ಆರೋಗ್ಯದಿಂದಿರುವ ದೇಶಗಳ ಪಟ್ಟಿಯಲ್ಲಿ ನಮ್ಮ ದೇಶ 129ನೇ ಸ್ಥಾನದಲ್ಲಿದೆ.

ಋಷಿಮುನಿಗಳು ತೋರಿಸಿದ ಆರೋಗ್ಯ ಶೈಲಿಯ ಜೀವನ ಪದ್ಧತಿ ಬಿಟ್ಟು ತಕ್ಷಣಕ್ಕೆ ಪರಿಹಾರ ಸಿಗುವ ಇಂಗ್ಲಿಷ್ ಔಷಧಿಗಳ ದಾಸರಾಗಿದ್ದೇ ಅನಾಹುತಕ್ಕೆ ಕಾರಣ ಎಂದು ಇತ್ತೀಚಿನ ಸಂಶೋಧನೆಗಳು ದೃಢಪಡಿಸುತ್ತಿವೆ.

ಪತಂಜಲಿ ಮಹರ್ಷಿಗಳು ಕೊಟ್ಟ ಯೋಗ ವಿದ್ಯೆಯನ್ನು ಬಿಟ್ಟು ಜಿಮ್ ಮತ್ತು ಇತರ ಸಾಧನಗಳನ್ನು ಕಂಡುಕೊಂಡವು. ಗರಡಿ ಮನೆ ಬಿಟ್ಟು ಇನ್ಯಾವುದೋ ಆಕರ್ಷಣೆಗೆ ಒಳಗಾದೆವು. ದೀರ್ಘಾಯುಷ್ಯದ ಗುಟ್ಟು ಪ್ರಾಣಾಯಾಮ ಎಂಬ ಸತ್ಯ ಮರೆತುಬಿಟ್ಟೆವು. ಧ್ಯಾನವು ಮನಸ್ಸಿಗೆ ಚೈತನ್ಯದ ಚಿಲುಮೆ ಎಂಬುದು ಅರ್ಥವಾಗಲೇ ಇಲ್ಲ.

ಚರಕ ಶುಶ್ರುತರು ತಿಳಿಸಿದ ಆರೋಗ್ಯದ ಸರಳ ಸೂತ್ರಗಳು ಎಷ್ಟೋ ಜನರಿಗೆ ಗೊತ್ತೇ ಆಗುತ್ತಿಲ್ಲ ಗೊತ್ತಾದರೆ ಬುದ್ಧಿವಂತರಾಗುತ್ತಾರೆ ಎಂದು ತಿಳಿದು ಅವುಗಳ ಬಗ್ಗೆ ತಿಳಿದಂತಹವರು ಮಾತನಾಡುವುದಿಲ್ಲ. ಅಲ್ಲದೆ ತಿಳಿದುಕೊಳ್ಳಬೇಕೆಂಬ ಹಂಬಲ ಇವತ್ತಿನ ಜನರಿಗೆ ಇಲ್ಲ. ಆರೋಗ್ಯ ಕ್ಷೇತ್ರದ ಒಂದಿಷ್ಟು ಜ್ಞಾನವನ್ನುತಿಳಿದುಕೊಂಡು ಅನುಸರಿಸಿದರೆ ಸಾಕು ಅಗಾಧವಾದ ಸುಧಾರಣೆಗಳನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಅಷ್ಟು ಕಠಿಣವು ಮಾಡಲು ಆಗದೇ ಇರುವಂತಹ ನಿಯಮಗಳನ್ನು ಅವರೇನು ತಿಳಿಸಿಲ್ಲ.

### ಬೇಗ ಏಳುವ ರೂಢಿ ಮಾಡಿಕೊಳ್ಳಿ

ಬೆಳಿಗ್ಗೆ ಸೂರ್ಯೋದಯಕ್ಕಿಂತ ಮುಂಚೆ ಎದ್ದೇಳಬೇಕು. ಅದರಿಂದ ಆಗುವ ಅನುಕೂಲ ಬಹಳಷ್ಟು ಇದೆ. ಅಂದರೆ ಬೆಳಗಿನ ಗಾಳಿ ಹೆಚ್ಚು ಶುದ್ಧವಾಗಿರುತ್ತದೆ ಎಂಬುದು ನಮ್ಮ ತಿಳವಳಿಕೆ. ಆದರೆ ವಿಜ್ಞಾನ ಹೇಳುವ ಪ್ರಕಾರ ಓಜೋನ್ ಪದರ ಭೂಮಿಗೆ ಹತ್ತಿರವಾಗಿರುತ್ತದೆ ಆದ್ದರಿಂದ ಹೆಚ್ಚು ಆಮ್ಲಜನಕ ಸಿಗುತ್ತದೆ.

ನಮ್ಮ ಋಷಿಗಳು ಹೇಳಿದ್ದು ಬೆಳಗಿನ ಸಮಯ ಬ್ರಾಹ್ಮಿ ಮುಹೂರ್ತವೆಂದು ತಿಳಿಸಿದ್ದಾರೆ. ಅರ್ಥ ದೇವರು ನಡೆದಾಡುವ ಸಮಯವದು ಎದ್ದು ಏನಾದರೂ ಚಟುವಟಿಕೆಯಿಂದ ತೊಡಗಿಕೋ ಎಂಬುದನ್ನು ಮಹಾತ್ಮರು ಈ ರೀತಿ ಹೇಳಿದ್ದಾರೆ. ನಂತರ ಎದ್ದ ತಕ್ಷಣವೇ ಎರಡು ಹಸ್ತವನ್ನುಉಜ್ಜಿ ಕಣ್ಣಿನ ಮೇಲೆ ಇಟ್ಟುಕೊಳ್ಳಬೇಕು. ಕಣ್ಣಿನ ರೆಪ್ಪೆಯನ್ನು ತೆರೆದು ಹಸ್ತವನ್ನು ನೋಡುವುದರಿಂದ ಕಣ್ಣಿನ ದೋಷಗಳು ಬರುವುದಿಲ್ಲವೆಂಬ ಅರಿವಿತ್ತು. ಆ ಮೇಲೆ ಬಾಯಿ ತೊಳೆಯದೆ ನೀರನ್ನು ಕುಡಿಯಬೇಕು. ಆದರೆ ನಾವುಗಳು ಬಾಯಿಯಲ್ಲಿ ಕೆಟ್ಟ ಬ್ಯಾಕ್ಟೀರಿಯಗಳು ಇರುತ್ತವೆ, ಅದಕ್ಕೋಸ್ಕರ ನಂತರ ನೀರು ಕುಡಿಯಬೇಕು ಎಂದು ಇಂದಿನ ವೈದ್ಯಶಾಸ್ತ್ರ ಹೇಳುತ್ತದೆ. ಅಲ್ಲದೆ ನಮ್ಮ ನಾಗರಿಕ ಸಮಾಜವು ಸಹ ಅದೇ ಸತ್ಯವೆಂದು ತಿಳಿದುಕೊಂಡಿದೆ. ಎದ್ದ ತಕ್ಷಣ ನೀರು ಕುಡಿಯುವುದರಿಂದ ಆರೋಗ್ಯವನ್ನು ಕಾಪಾಡಿಕೊಳ್ಳಲು ಅನುಕೂಲವಾಗುತ್ತದೆ. ರಾತ್ರಿ ಮಲಗಿ ಬೆಳಗ್ಗೆ ಎದ್ದ ನಂತರ ಬಾಯಲ್ಲಿರುವ ಒಳ್ಳೆಯ ಮತ್ತು ಕೆಟ್ಟ ಬ್ಯಾಕ್ಟೀರಿಯಗಳು ನೀರು ಕುಡಿದ ತಕ್ಷಣ ಹೊಟ್ಟೆಗೆ ಹೋದಾಗ ಹೊಟ್ಟೆಯಲ್ಲಿರುವ ಇನ್ನೊಂದಿಷ್ಟು ಕೆಟ್ಟ ಬ್ಯಾಕ್ಟೀರಿಯಗಳನ್ನು ತಿಂದು ಮಲಮೂತ್ರದ ಮೂಲಕ ಹೊರ ಕಳಿಸಲು ಸಹಾಯ ಮಾಡುತ್ತವೆ. ಇಂತಹ ಸತ್ಯವನ್ನು ಮರೆಮಾಚಿ ಹಲ್ಲುಜ್ಜಿದ ನಂತರವೇ ಬಾಯಿಯ ದುರ್ಗಂಧ ದೂರವಾಗುತ್ತದೆ. ಅಲ್ಲದೆ ಬಾಯಿಯ ಆರೋಗ್ಯ ಚೆನ್ನಾಗಿ ಆಗುತ್ತದೆ ಎಂದು



ನಂಬಿಕೊಂಡು ನಮ್ಮ ಆರೋಗ್ಯವನ್ನು ಕೆಡಿಸಿಕೊಳ್ಳುತ್ತಿದ್ದೇವೆ.

### ಬೆರಳಿಂದ ಹಲ್ಲುಜ್ಜಿ

ಸ್ವತಃ ಬೆರಳಿನಲ್ಲಿ ಹಲ್ಲು ತಿಕ್ಕುವುದರಿಂದ ಮೆದುಳಿನ ನರಗಳು ಚುರುಕಾಗುತ್ತಿದ್ದವು. ಅಲ್ಲದೆ ಬೇವಿನ ಕಡ್ಡಿಯನ್ನು ಆಗಾಗ ಬಳಸುತ್ತಿದ್ದೆವು. ಬರಿ ಬೆಳಿಗ್ಗೆ ಎದ್ದು ನೀರು ಕುಡಿಯುವುದು ಮತ್ತು ಹಲ್ಲುಜ್ಜುವುದರಿಂದಲೇ ನಮ್ಮ ಆರೋಗ್ಯ ಬಹಳಷ್ಟು ಸುಧಾರಿಸುತ್ತಿತ್ತು. ಉದಾಹರಣೆ ಹೇಳಬೇಕೆಂದರೆ ನಮ್ಮ ಅಜ್ಜಿಗೆ 92 ವರ್ಷ. ಇಂದಿಗೂ ಅವರ ಹಲ್ಲುಗಳು ಬಿದ್ದಿಲ್ಲ. ನನಗೆ ಅರಿವು ಬಂದಾಗಿನಿಂದ ನೋಡುತ್ತಾ ಬಂದಿದ್ದೇನೆ ಹಲ್ಲುಜ್ಜುವುದಕ್ಕೆ ಬೆರಳನ್ನೇ ಉಪಯೋಗಿಸುತ್ತಿದ್ದಾರೆ ಈಗಲೂ ನೆನಪಿನ ಶಕ್ತಿ ತುಂಬ ಚುರುಕಾಗಿದೆ. ಬಹಳ ಚಟುವಟಿಕೆಯಿಂದ ಇದ್ದಾರೆ. ಕಾರಣ ನಮ್ಮ ಹಿಂದಿನವರ ಪರಂಪರೆ ಅನುಸರಿಸುತ್ತಿರುವುದೇ ಅವರ ಆರೋಗ್ಯದ ಗುಟ್ಟು.

### ತಣ್ಣೀರಿನಿಂದ ರಕ್ತ ಚಲನೆ

ಆನಂತರದಲ್ಲಿ ತಣ್ಣೀರಿನಲ್ಲಿ ಮುಖ ತೊಳೆಯುವುದರಿಂದ ಆಗುವ ಅನುಕೂಲಗಳ ಬಗ್ಗೆ ತಿಳಿಸಿರುತ್ತಾರೆ. ತಣ್ಣೀರನ್ನು ಮುಖಕ್ಕೆ ಹಾಕುವುದರಿಂದ ಮುಖದಲ್ಲಿ ರಕ್ತ ಚಲನೆ ಚೆನ್ನಾಗಿ ಆಗುತ್ತದೆ. ಸ್ನಾನದ ಬಗ್ಗೆ ಮಾಹಿತಿಯನ್ನು ತಿಳಿದುಕೊಂಡರೆ ಇಷ್ಟೊಂದು ಜ್ಞಾನ ಅವರಲ್ಲಿ ಹೇಗಿತ್ತು ಎಂದು ಆಶ್ಚರ್ಯ ಪಡುತ್ತೀರಿ. ತಣ್ಣೀರಿನ ಸ್ನಾನವೇ ಶ್ರೇಷ್ಠವೆಂದು ತಿಳಿಸಿದ್ದಾರೆ. ಏನು ಮಾಡುವುದು ಬಿಸಿನೀರು ಬೇಕೆಂದು ಬಯಸುವ ಏಕೈಕ ಜೀವಿ ಎಂದರೆ ಮನುಷ್ಯ ಮಾತ್ರನೇ. ಆರೋಗ್ಯದಿಂದಿರಬೇಕಾದರೆ ಕೊನೆಗೆ ಉಗುರು ಬೆಚ್ಚಗಿನ ನೀರನ್ನು ಸ್ನಾನಕ್ಕೆ ಬಳಸಿಕೊಳ್ಳಲಿ.

ತಣ್ಣೀರಿನ ಸ್ನಾನವಾದರೆ ತಲೆ ಮೇಲೆ ಮೊದಲು ನೀರನ್ನು ಹಾಕಿಕೊಂಡು ಸ್ನಾನ ಮಾಡಬೇಕು ಬಿಸಿನೀರಿನ ಸ್ನಾನವಾದರೆ ಪಾದದಿಂದ ಸ್ನಾನ ಮಾಡಬೇಕು. ನೋಡಿ ಅವರಿಗೆ ಎಂತಹ ವಿಜ್ಞಾನ ಗೊತ್ತಿತ್ತೆಂದು. ಯಾವತ್ತೂ ಪಾದಗಳು ಬಿಸಿ ಇರಬೇಕು ತಲೆ ತಣ್ಣಗಿರಬೇಕೆಂದು. ಆಗಲೇ ಅವರು ಆ ಮಾತನ್ನು ಹೇಳಿದ್ದಾರೆ. ನಮಗೆ ಅರ್ಥವಾಗುತ್ತಿಲ್ಲ ಅಷ್ಟೇ. ನಮ್ಮ ಚರ್ಮಗಳು ಉಸಿರಾಡುತ್ತವೆ ಎಂಬುದನ್ನು ಅರಿತು ಆಗಾಗ ದೇಹಕ್ಕೆ ಸಂಪೂರ್ಣ ಎಣ್ಣೆಯನ್ನು ಹಚ್ಚಬೇಕು. ದೇಹದ ಎಲ್ಲಾ ರಕ್ತನಾಳಗಳಲ್ಲಿ ರಕ್ತ ಸಂಚಾರ ಸರಾಗವಾಗಿ ನಡೆಯುತ್ತದೆ. ಆ ಮೂಲಕ ರಕ್ತದೊತ್ತಡ ಹೃದಯಘಾತವನ್ನು ತಪ್ಪಿಸಿಕೊಳ್ಳಬಹುದು. ಅಲ್ಲದೆ ಚರ್ಮದ ಕಾಂತಿಯು ಹೆಚ್ಚಾಗುತ್ತದೆ ಎಂಬ ಅರಿವು ನಮ್ಮ ಪೂರ್ವಜರುಗಿತ್ತು. ಈಗ ನಾವು ವರ್ಷಕ್ಕೆ ಒಂದು ಬಾರಿ ಯಾದರೂ ಎಣ್ಣೆಯನ್ನು ಹಚ್ಚಿ ಸ್ನಾನ ಮಾಡುತ್ತಿವೋ ಇಲ್ಲವೋ ಗೊತ್ತಿಲ್ಲ. ಕಾರಣ ನಮಗೆ ಸಮಯ ಸಾಕಾಗುತ್ತಿಲ್ಲ. ಅಲ್ಲದೆ ಎಣ್ಣೆಯನ್ನು ಹಚ್ಚುವುದರಿಂದ ಆಗುವ ಲಾಭಗಳು ಏನೆಂಬುದೇ ಗೊತ್ತಿಲ್ಲದೇ ಇರುವಂತಹ ಪರಿಸ್ಥಿತಿಯಲ್ಲಿ ಜೀವಿಸುತ್ತಿದ್ದೇವೆ.

ಅಲ್ಲದೆ ಕಿವಿ, ಮೂಗಿ, ಕಣ್ಣಿಗೆ ಎಣ್ಣೆ ಹಾಕುತಿದ್ದರು. ಇದರಿಂದ ಕಣ್ಣಿನ ಮೂಗಿನ ಕಿವಿಯ ಸಮಸ್ಯೆಗಳು ಬರದಂತೆ ತಡೆಯುತ್ತಿದ್ದವು. ಇನ್ನು ಮುಂದುವರೆದು ನೆಲದ ಮೇಲೆ ಕುಳಿತು ಊಟ ಮಾಡಬೇಕೆಂಬ ಜ್ಞಾನವನ್ನು ಸಹ ಅವರು ತಿಳಿದಿದ್ದರು ಕುಳಿತು ಊಟ ಮಾಡುವುದರಿಂದ ಹೊಟ್ಟೆಯ ಭಾಗ ಸಣ್ಣದಾಗುತ್ತದೆ ಎಷ್ಟು ಬೇಕೋ ಅಷ್ಟು ಊಟ ಮಾಡಲು ಸಾಧ್ಯವಾಗುತ್ತದೆ.

ಅಲ್ಲದೆ ಮೆದುಳಿನಿಂದ ಜೀರ್ಣಕ್ರಿಯೆಗೆ ಸಂದೇಶ ಕಳಿಸುತ್ತದೆ ನಿನ್ನ ಕೆಲಸ ಆರಂಭಿಸು ಏನು ಆಹಾರವನ್ನು ಕೊಡುತ್ತಿದ್ದಾನೆ ಎಂದು. ಇಷ್ಟೆಲ್ಲಾ ಅವರಿಗೆ ಹೇಗೆ ಗೊತ್ತಿತ್ತು ಎಂಬ ಜಿಜ್ಞಾಸೆ ಮೂಡುವುದು ಸಹಜ ಅವರಲ್ಲೋ ಬೇರೆಯವರ ಮೇಲೆ ಪ್ರಯೋಗ ಮಾಡಲಿಲ್ಲ ತಮ್ಮ ಮೇಲೆ ತಾವೇ ಪ್ರಯೋಗ ಮಾಡಿಕೊಳ್ಳುತ್ತಾ ಅದರಿಂದ ಕಂಡುಕೊಂಡ ಸತ್ಯವನ್ನು ತಮ್ಮ ಆರೋಗ್ಯ ಸೂತ್ರ ಗ್ರಂಥದಲ್ಲಿ ಬರೆದಿದ್ದಾರೆ ಅದನ್ನೇ ಭಾರತೀಯರು ಸಾವಿರಾರು ವರ್ಷಗಳಿಂದ ಆಚರಣೆ ಮಾಡುತ್ತಾ ತಮ್ಮ ಮುಂದಿನ ಪೀಳಿಗೆಗೂ ಕಲಿಸುತ್ತಾ ಬಂದಿದ್ದರು ಬುದ್ಧಿವಂತರಾದ 20 ಮತ್ತು 21ನೇ ಶತಮಾನದ ಜನರು ನಮ್ಮ ಹಿರಿಯರು ಅನುಸರಿಸಿದ ಆಚರಣೆಗಳಿಗೆ ತಿಲಾಂಜಲಿ ಇಡುತ್ತಾ ನಮ್ಮದೇ ಬುದ್ಧಿವಂತಿಕೆ ಬಳಸುತ್ತಾ ಬಂದಿದ್ದೇವೆ. ಆದಕಾರಣ ಆರೋಗ್ಯ ಕ್ಷೇತ್ರದಲ್ಲಿ ಕುಸಿಯುತ್ತಾ ಆರ್ಥಿಕ ಕ್ಷೇತ್ರದಲ್ಲಿ ಮೇಲೇರುತ್ತ ಹೋಗುತ್ತಿದ್ದೇವೆ. ಅಂದರೆ ಹಣವಂತರಾಗುತ್ತಿದ್ದೇವೆ ಆರೋಗ್ಯವಂತರಾಗುತ್ತಿಲ್ಲ. ಹಾಗಾದರೆ ಮತ್ತೇನು ಮಾಡಬೇಕು ಮೇಲೆ ತಿಳಿಸಿದ ಮೂರು ನಾಲ್ಕು ಉದಾಹರಣೆಗಳನ್ನು ಒಂದಿಷ್ಟು ಪಾಲಿಸುವ ಪ್ರಯತ್ನ ಮಾಡಿದಾಗ ಅದರ ಅನುಭವ ಆಗುತ್ತದೆ.

### ಜೀವನ ಕ್ರಮ ಬದಲಾಯಿಸಿ

ಬೆಳಗ್ಗೆಯಿಂದ ರಾತ್ರಿ ಮಲಗುವ ತನಕ ಹೇಗಿದ್ದರೆ ನಮ್ಮ ಜೀವನ ಕ್ರಮ ಹೇಗಿದ್ದರೆ ಆರೋಗ್ಯದಿಂದ ಇರಬಹುದು ಎಂಬ ಮಾಹಿತಿಯನ್ನು ವಾಗ್ಭಟರ




ಚರಕ ಶುಶ್ರುತ ಆರೋಗ್ಯ ಸೂತ್ರದ ಗ್ರಂಥಗಳನ್ನು ತಾವುಗಳು ಒಂದಿಷ್ಟು ಓದಿ ತಿಳಿದುಕೊಳ್ಳಿ. ಎಲ್ಲವನ್ನು ನಾನೇ ತಿಳಿಸುತ್ತಾ ಹೋದರೆ ನಿಮಗೊಂದಿಷ್ಟು ಮೆದುಳಿಗೆ ಕೆಲಸ ಇಲ್ಲದಂತೆ ಆಗುತ್ತದೆ. ಆರೋಗ್ಯವಾಗಿರಬೇಕು ಎಂಬ ಹಂಬಲವಿದ್ದರೆ ಮಾತ್ರ ತಡಕಾಡಿ ಓದಿ. ನಂತರದಲ್ಲಿ ಅನುಷ್ಠಾನ ಮಾಡುವ ಪ್ರಯತ್ನ ಮಾಡಿದರೆ ಆಗಲೇ ನಮಗೆ ಆರೋಗ್ಯದ ಸವಿ ಸಿಗುವುದು ಇಲ್ಲದೆ ಹೋದರೆ ಬರಿ ಜ್ಞಾನ ತಿಳಿದುಕೊಂಡು ಸುಮ್ಮನಿದ್ದರೆ ಆರೋಗ್ಯ ವಂತನಾಗಲು ಸಾಧ್ಯವೇ.

ಸಾವಿರಾರು ವರ್ಷಗಳಿಂದ ಸಹಜ ಹೆರಿಗೆಗೆ ಪ್ರಸಿದ್ಧಿಯಾದ ಭಾರತದಲ್ಲಿ ಇಂದು ನಾರ್ಮಲ್ ಡೆಲಿವರಿ ಆದರೆ ಅದೇ ಪವಾಡ ಎಂಬಂತಾಗಿದೆ. ಇಂತಹ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಹಿಂದಿನವರ ಪದ್ಧತಿ ಅನುಸರಿಸಿದರೆ ಏಕೆ ಸಾಧ್ಯವಿಲ್ಲವೆಂದು ತಿಳಿದು ನಮ್ಮ ನಿಮ್ಮ ಶ್ರೀಮತಿಗೆ ಸಹಜ ಹೆರಿಗೆಗೆ ಅನುಕೂಲವಾಗುವ ಹಣ್ಣುಗಳನ್ನು ಒಂದಿಷ್ಟು ಆಹಾರ ಕ್ರಮಗಳನ್ನು ಬದಲಾಯಿಸಿದೆ. ಯಾವುದನ್ನು ತಿನ್ನಬಾರದು ಎಂದು ಹೇಳುತ್ತಾರೋ ಅಂತಹ ಹಣ್ಣುಗಳನ್ನು ಹೆಚ್ಚು ತಿನಿಸುತಿದ್ದೆ ಅದರಲ್ಲೂ ಬಾಳೆಹಣ್ಣು, ಸೀಬೆಹಣ್ಣು, ಆಗಾಗ ಪಪ್ಪಾಯಿ, ಒಂದಿಷ್ಟು ಹಸಿ ತರಕಾರಿ ಹೀಗೆ ಮಾಡಿದ್ದರ ಫಲ ಯಾವುದೇ ವಿಟಮಿನ್ ಮಾತ್ರೆಗಳಿಲ್ಲದೆ ಸಹಜ ಹೆರಿಗೆ ಜೊತೆಗೆ ಮಗುವಿನ ಬೆಳವಣಿಗೆ ಮತ್ತು ಆರೋಗ್ಯ ತುಂಬಾ ಚೆನ್ನಾಗಿತ್ತು. ಇಂತಹ ನಮ್ಮ ಶಿಬಿರಕ್ಕೆ ಬಂದಂತಹ ಅನೇಕ ಕಾಯಿಲೆಗಳಿರುವ ಜನರಿಗೆ ಅರಿವು ಮೂಡಿಸಿ ಅವರ ಆರೋಗ್ಯ ಸುಧಾರಣೆಗೆ ನಮ್ಮ ಹಿಂದಿನವರು ತಿಳಿಸಿದ ಆರೋಗ್ಯ ಸೂತ್ರಗಳ ಜ್ಞಾನವನ್ನು ಹಂಚುತ್ತಾ ಅವರು ಆರೋಗ್ಯವಂತ ಜೀವನ ನಡೆಸಲು ಒಂದಿಷ್ಟು ಸಣ್ಣ ಪ್ರಯತ್ನ ನಡೆಯುತ್ತಿದೆ. ಒಂದು ಸಣ್ಣ ಕಥೆ ಈಗಿನ ಭಾರತದ ಆರೋಗ್ಯ ಕ್ಷೇತ್ರದ ಪರಿಸ್ಥಿತಿ ಹೇಗಿದೆ ಎಂಬುದು ಅರ್ಥವಾಗುತ್ತದೆ ಓದಿಕೊಳ್ಳಿ. ಸತ್ಯ ಮತ್ತು ಸುಳ್ಳು ಇಬ್ಬರು ಬಹಳ ಆತ್ಮೀಯ ಸ್ನೇಹಿತರಿದ್ದರು. ಒಂದು ದಿನ ಸ್ನಾನಕ್ಕೆಂದು ನದಿಗೆ ಹೋದರು ಬಟ್ಟೆಗಳನ್ನು ದಂಡೆಯ ಬದಿ ಇಟ್ಟು ಸ್ನಾನ ಮಾಡುತ್ತಿದ್ದರು ಆಗ ಸುಳ್ಳು ಬೇಗ ಎದ್ದು ಬಂದು ಸತ್ಯದ ಬಟ್ಟೆಗಳನ್ನು ಹಾಕಿಕೊಂಡು ಊರು ತುಂಬಾ ಸತ್ಯವಂತನಂತೆ ನಾಟಕ ಮಾಡುತ್ತಿದ್ದನು. ಸತ್ಯದ ಬಟ್ಟೆ ಹಾಕಿಕೊಂಡು ತಕ್ಷಣ ಸುಳ್ಳು ಸತ್ಯವಾಗುವುದಿಲ್ಲ ಅಲ್ಲವೇ. ಹಾಗೆ ಆರೋಗ್ಯ ಕ್ಷೇತ್ರದಲ್ಲೂ ಸುಳ್ಳೇ ಸತ್ಯವಾಗಿ ನಡೆಯುತ್ತಿದೆ. ಒಂದಲ್ಲ ಒಂದು ದಿನ ಸುಳ್ಳಿನ ಬಟ್ಟೆ ಕಳಚಿದಾಗ ಸತ್ಯದ ಅರಿವು ಗೊತ್ತಾಗುತ್ತದೆ. ಬೇಗ ತಿಳಿದರೆ ಬಹಳ ಒಳ್ಳೆಯದು. ಅದರಲ್ಲೂ ಭಾರತೀಯರಾದ ನಮಗೆ ಬೇಗ ಅರ್ಥವಾದರೆ ಇಡೀ ವಿಶ್ವದಲ್ಲೇ ತುಂಬಾ ಮುಂದುವರಿದ ರಾಷ್ಟ್ರವಾಗುವುದರಲ್ಲಿ ಅನುಮಾನವೇ ಇಲ್ಲ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248